

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING BAGALKOT

ಸಂಪಾದಕರು : ಮಾರುತಿ ಹೊಸಮನಿ

Editor : MARUTI BASAVANTAPPA HOSAMANI

Cell : +91 97413 19119

Volume : 06 Issue : 194 Thursday 21-12-2023 E-mail : maruti.b.hosamani76@gmail.com Page: 4 Price : Rs. 1/-


## ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಆಶಾ ಕಾರ್ಯ ಕರ್ತೆಯರಿಂದ ಪ್ರತಿಭಟನೆ




ಹುನಗುಂದ : ಕೇಂದ್ರ ಸರ್ಕಾರ ದುಡಿಯುವ ಮತ್ತು ಕೆಳ ವರ್ಗದ ಜನರಿಗೆ ಅಚ್ಛೆ ದಿನ ಆಯೇಗಾ ಬರುತ್ತದೆ ನಾವು ತಂದೇ ತರುತ್ತೇವೆ ಎಂದು ಹೇಳಿ ಅಧಿಕಾರವನ್ನು ಪಡೆದು ಸಧ್ಯ ದುಡಿಯುವ ವರ್ಗದ ಜೀವನವನ್ನು ಮತ್ತಷ್ಟು ಸಂಕಷ್ಟಕ್ಕೆ ತಳುತ್ತಿದ್ದು ಮತ್ತು ಆರೋಗ್ಯ ಇಲಾಖೆಯಲ್ಲಿ ಪ್ರಮಾಣೀಕ ಸೇವೆ ಸಲ್ಲಿಸುತ್ತಿರುವ ಆಶಾ ಕಾರ್ಯ ಕರ್ತೆಯರ ಬಹು ದಿನಗಳ ವಿವಿಧ ಬೇಡಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮಂಗಳವಾರ ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯುನಿಯನ್ ಸೆಂಟರ್ ತಾಲೂಕ ಘಟಕದಿಂದ ಪ್ರತಿಭಟನೆ ನಡೆಸಿ ತಹಸೀಲ್ದಾರ ನಿಂಗಪ್ಪ ಬಿರಾದಾರ ಅವರಿಗೆ ಮನವಿ ಸಲ್ಲಿಸಿತು.

ಈ ವೇಳೆ ಆಶಾ ಕಾರ್ಯ ಕರ್ತೆಯರ ಜಿಲ್ಲಾ ಕಾರ್ಯದರ್ಶಿ ಶೈನಜಾ ಜಂಗಿ ಮಾತನಾಡಿ ಜೀವನದ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸುವ ಸಾಮಾನ್ಯ ಜನರ ಬದುಕೆ ಕತ್ತಲಾಗಿದೆ.ಬಡವರ ಹಕ್ಕು ಮಾಯವಾಗುತ್ತಿವೆ.ದಿನೆ ದಿನೇ ಖಾಯಂ ಉದ್ಯೋಗಗಳು ಕಡಿತ ಗೊಳ್ಳಿತ್ತಿವೆ.ಬಹುತೇಕ ಉದ್ಯೋಗಗಳು ಖಾಸಗೀಕರಣ ಗೊಳ್ಳುತ್ತಿವೆ.ಸಿಗುವ ವೇತನ ಜೀವನ ವೆಚ್ಚಕ್ಕೆ ಸಾಕಾಗುತ್ತಿಲ್ಲ.ವಿದ್ಯುತ್ ಪ್ರೀಪೇಯ್ಡ ಸ್ಮಾರ್ಟ್ ಮೀಟರ್ ಅಳವಡಿಕೆಯನ್ನು ನಿಲ್ಲಿಸಬೇಕು,ಎಲ್ಲಾ ಪಿಂಚಣ ದಾರರಿಗೆ ಬೆಲೆ ಸೂಚ್ಯಂಕದ ಮೇಲೆ ಪಿಂಚಣೆ ನಿಗಧಿ ಗೊಳಿಸಬೇಕು ಮತ್ತು ಕನಿಷ್ಠ 10 ಸಾವಿರ ಪಿಂಚಣೆಯನ್ನು ನೀಡಬೇಕು,ಪಿಂಚಣೆ ಹಣವನ್ನು ಷೇರು ಮಾರುಕಟ್ಟೆಯಲ್ಲಿ ಅಳವಡಿಸುವುದ್ದನ್ನು ನಿಲ್ಲಿಸಬೇಕು, ರಾಷ್ಟ್ರೀಯ ಕನಿಷ್ಠ ವೇತನ 20 ಸಾವಿರ ನೀಡಬೇಕು,ಎಲ್ಪಿಜಿ ಸಿಲೇಂಡರ್ ಬೆಲೆಯು ಏರಿಕೆಯನ್ನು ನಿಲ್ಲಿಸಬೇಕು,ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುವ ಎಲ್ಲ ಕಾರ್ಮಿಕರನ್ನು ಖಾಯಂ ಗೊಳಿಸಬೇಕು,ಎನ್ಪಿಎಸ್ ರದ್ದುಗೊಳಿಸಿ ಓಪಿಎಸ್ ಜಾರಿಗೊಳಿಸಬೇಕು ಎಂದು ಒತ್ತಾಯಿಸುವ ಮೂಲಕ ದೇಶದ ಅಪಾರ ಸಂಪತ್ತನ್ನು ಸೃಷ್ಟಿಸುವ ಬೃಹತ್ ಉದ್ದಿಮೆಗಳನ್ನು ಖಾಸಗೀಕರಣ ಗೊಳಿಸುವುದನ್ನು ನಿಲ್ಲಿಸಬೇಕು ಎಂದರು.

ತಾಲೂಕ ಅಧ್ಯಕ್ಷೆ ಅಂಬಿಕಾ ಡೊಳ್ಳಿನ ಮಾತನಾಡಿ.ಎಲ್ಲರಿಗೂ ಆಹಾರ,ಶಿಕ್ಷಣ ಮತ್ತು ಆರೋಗ್ಯ ರಕ್ಷಣೆ ಕಾನೂನು ಜಾರಿಗೊಳಿಸಿ,ತೋಟದ ಕಾರ್ಮಿಕರಿಗೆ ಕನಿಷ್ಠ ವೇತನ ಸಾಮಾಜಿಕ ಭದ್ರತೆ ಸೌಲಭ್ಯ ಒದಗಿಸಿ,ಅಸಂಘಟಿತ ಕಾರ್ಮಿಕರ ಸೇರಿದಂತೆ ಎಲ್ಲಾ ಬಗೆಯ ಕಾರ್ಮಿಕರಿಗೆ ವಿಮಾ ರಕ್ಷಣೆ ಮತ್ತು ಇಎಸ್ಐ ಪಿಎಫ್ ಸೌಲಭ್ಯವನ್ನು ಒದಗಿಸ ಬೇಕೆಂದು ಆಗ್ರಹಿಸಿದರು.

ಗೌರಿ ಸಾನು ಮಾತನಾಡಿ ವಿವಿಧ ಬಗೆಯ 24 ಬೇಡಿಕೆಗಳನ್ನು ಇಡೇರಿಸುವಂತೆ ಹಕ್ಕೊತ್ತಾಯ ದೊಂದಿಗೆ ತಹಶೀಲ್ದಾರ ಮೂಲಕ ಮಾನ್ಯ ಪ್ರಧಾನ ಮಂತ್ರಿಗಳಿಗೆ ಮನವಿ ಸಲ್ಲಿಸಿದ್ದೇವೆ. ಸರ್ಕಾರ ಈ ಬೇಡಿಕೆಗಳನ್ನು ಇಡೇರಿಸಲೇಬೇಕು ಎಂದು ಅವರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಗಂಗವ್ವ ಕುಂಟೋಜಿ, ಪ್ರೇಮಾ ಗಾಣಗೇರ, ಸೈರಾಬಾನು ತೆಗ್ಗಿನಮನಿ, ಮಾಲಾ ಕಳಸಾಮಠ, ಯೋಗವ್ವ ನಾಯಕ, ರೇಣುಕಾ ಹಡಪದ ಸೇರಿದಂತೆ ಆಶಾ ಕಾರ್ಯ ಕರ್ತರು ಪಾಲ್ಗೊಂಡಿದ್ದರು.

**ತಾಲೂಕ ವರದಿಗಾರರು: ಮಲ್ಲಿಕಾರ್ಜುನ.ಎಂ.ಬಂಡರಗಲ್ಲ ಹುನಗುಂದ**

## ನುಡಿ ಮುತ್ತುಗಳು



* ಬಗ್ಗೆ ನಿಮಗೆ ಅರಿವಿಲ್ಲವೆಂದ ಮೇಲೆ ಮತ್ತೊಬ್ಬರನ್ನು ಹೀಯಾಳಿಸಿ ಮಾತನಾಡುವ ಅಧಿಕಾರ ನಿಮಗಿಲ್ಲ.
* ಯಾರು ಎಷ್ಟೇ ಬಲಶಾಲಿಯಾದರುನಿಮ್ಮ ತನ್ನ ಹೆಣವನ್ನು ತಾನೇ ಹೊರಲಾರ.
* ಏನು ಬೇಕಾದರೂ ಬಿಟ್ಟು ಬದುಕು ಆದರೆ ಆತ್ಮವಿಶ್ವಾಸ ಮತ್ತು ಸ್ವಾಭಿಮಾನ ಬಿಟ್ಟು ಒಂದು ಕ್ಷಣ ಕೂಡ ಬದುಕಬೇಡ.
* ಬದುಕಿನ ಬಗ್ಗೆ ಭಯವಿರಲಿ, ದಿನ ಕಳೆದಂತೆ ಸಾವು ಒಂದು ದಿನ ಸಮೀಪವಾಗುತ್ತಿದೆ ಎಂಬ ಅರಿವಿರಲಿ.
* ಸಾವು ನಮ್ಮನ್ನು ಹುಡುಕಿಕೊಂಡು ಬರುವದರೋಳಗಾಗಿ ಸಾಧಕನಾಗಿ ಬಿಡೋಣ ಕಾರಣ ಇರುವುದೊಂದೇ ಜನ್ಮ.
* ಭಗವಂತ ನಿಮಗೆ ಅತ್ಯದ್ಭುತವಾದ ನೆನಪಿನ ಶಕ್ತಿಯ 10 ಲಕ್ಷ ಜಿಬಿ ಮೆದುಳು ಕೊಟ್ಟಿದ್ದಾನೆ ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಿ.
* ನಿಮಗಾಗಿ ಅಲ್ಲದಿದ್ದರೂ ನಿಮ್ಮವರಿಗಾಗಿ ಬದುಕಿ.
* ಸಾಯುವುದಕ್ಕೆ ಹೆದರಬೇಡಿ ಬದುಕುವುದಕ್ಕೆ ಅಂಜಬೇಡಿ.
* ಸದಾ ಮೊಬೈಲ್ ನೋಡುವುದರಲ್ಲಿ ಸಮಯ ವ್ಯರ್ಥ ಮಾಡಬೇಡಿ, ಮತ್ತೊಬ್ಬರ ಮೊಬೈಲ್ ಸ್ಟೇಟಸ್ ಗಳಲ್ಲಿ ನಿಮ್ಮ ಸಾಧನೆ ಬರುವಂತೆ ಮಾಡಿ.
* ಜೀವನ ಚಿಗುರುವ ಎಲೆಯಂತಾಗಬೇಕು ವಿನಹ ಬಾಡುವ ಎಲೆಯಂತಾಗಬಾರದು.
* ಪುಸ್ತಕ ಹಿಡಿದ ಕೈ ಪುಸ್ತಕ ಬರೆಯಬಲ್ಲದು ಹಾಗೆಯೇ ಪುಸ್ತಕ ಬರೆದ ಕೈ ಚರಿತ್ರೆ ಸೃಷ್ಟಿಸಬಲ್ಲದು.
* ಇತಿಹಾಸದ ಪುಟಗಳಲ್ಲಿ ನಿಮಗಾಗಿ ಒಂದು ಪುಟ ಭಗವಂತ ಮೀಸಲಿಟ್ಟಿರುತ್ತಾನೆ. ಆ ಪುಟದ ಸಾಧಕರ ಪರಿಚಯ ನಿಮ್ಮದಾಗಬೇಕೇ ವಿನಹ ಬೇರೆಯವರಿಗೆ ಬಿಟ್ಟು ಕೊಡಬೇಡಿ

**–ಶ್ರೀ ಮುತ್ತು.ಯ.ವಡ್ಡರ**
**( ಶಿಕ್ಷಕರು, ಹಿರೇಮಾಗಿ )**
**ಬಾಗಲಕೋಟ**
**Mob-9845568484**

## ವಿದ್ಯುತ್ ಕಳ್ಳತನ ಮಾಡಿದರೆ ಕಾನೂನು ಪ್ರಕಾರ ಸೂಕ್ತ ಕ್ರಮ: ಉಮೇಶ ಸೊಲ್ಲಾಪುರ ಎಚ್ಚರಿಕೆ

ಇಂಡಿ : ರಾತ್ರಿ ಸಮಯದಲ್ಲಿ ವಿದ್ಯುತ್ ಕಂಬಗಳ ಮೂಲಕ ನೇರವಾಗಿ ವಾಯರ್ ಮೂಲಕ ಕದ್ದು ,ಹುಕ್ಕು ಹಾಕಿ, ವಿದ್ಯುತ್ ಕಳ್ಳತನ ಮಾಡುತ್ತಿರುವುದೂ ಮಹಾ ಅಪರಾಧವಾಗಿದೆ ಎಂದು ಹೆಸ್ಕಾಂ ನಾದ ಗ್ರಾಮೀಣ ಶಾಖೆಯ ಶಾಖಾಧಿಕಾರಿಗಳಾದ ಶ್ರೀ ಉಮೇಶ ಸೊಲ್ಲಾಪುರ ಸಾರ್ವಜನಿಕರಿಗೆ ಅರಿವು ಮೂಡಿಸಿದರು.

ಅವರು ತಾಲೂಕಿನ ಅರ್ಜುಣಗಿ ಬಿಕೆ ಹಾಗೂ ಅರ್ಜುಣಗಿ ಕೆಡಿ ಗ್ರಾಮಗಳಿಗೆ ತೆರಳಿ ವಿದ್ಯುತ್ ಬಾಕಿ ವಸೂಲಿ ಹಾಗೂ ಅನಧಿಕೃತ ವಿದ್ಯುತ್ ಕಾರ್ಯ ಚರಣೆಯಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯ ಕ್ರಮದಲ್ಲಿ ಮಾತನಾಡಿದರು.

ಕಳ್ಳತನದಿಂದಾಗಿ ವಿದ್ಯುತ್ ಪೋಲಾಗಿ ನಮ್ಮ ಇಲಾಖೆಗೆ ಹೆಚ್ಚಿನ ಹೊರೆ ಬೀಳುತ್ತಿರುವುದರಿಂದ ವಿದ್ಯುತ್ ಕಳ್ಳತನ ಮಾಡಬಾರದು. ಒಂದು ವೇಳೆ ವಾಮ ಮಾರ್ಗದಿಂದ ವಿದ್ಯುತ್ ಬಳಕೆ ಮಾಡಿದರೆ ಸೂಕ್ತ ಕಾನೂನು ಕ್ರಮ ಕೈಗೊಂಡು ಭಾರಿ ದಂಡ ವಿಧಿಸಲಾಗುವುದು.



ಆದ್ದರಿಂದ ದಯವಿಟ್ಟು ಯಾರು ವಿದ್ಯುತ್ ಕಳ್ಳತನ ಮಾಡಲು ಮುಂದಾಗಬಾರದು ಎಂದರು.

ಈ ವೇಳೆ ಅನಧಿಕೃತವಾಗಿ ಬಳಕೆ ಮಾಡುತ್ತಿದ್ದ ವಾಟರ್ ಹೀಟರ್ ಹಾಗೂ ವಾಯರ್ ವಶ ಪಡಿಕೊಂಡರು. ಇದರ ಜೊತೆಯಲ್ಲಿ ಗ್ರಾಮೀಣ ಭಾಗದ ಜನರಿಗೆ ವಿದ್ಯುತ್ ಬಳಕೆ ಕುರಿತು ಅರಿವು ಮೂಡಿಸಿದರು.

ಕಾರ್ಯ ಚರಣೆಯಲ್ಲಿ ನಾದ ಶಾಖೆಯ ಶಾಖಾಧಿಕಾರಿಗಳಾದ ಶ್ರೀ ಉಮೇಶ ಸೊಲ್ಲಾಪುರ.ಮಹಾಂತೇಶ ಇಂಡಿ.ಬೋಗೇಶ ಶಿರಶ್ಯಾಡ.ಆರೀಫ ಇನಾಮದಾರ.ಶಿವಲಿಂಗ ತೆಗ್ಗೆಳ್ಳಿ.ಸಂತೋಷ ರಾವೂರ.ಶರಣು ಹೊಸೂರ.ಸಾಹೇಬಗೌಡ ತಾವರಖೇಡ.ಅವಿನಾಶ ಗೊಂದಳಿ.ಸಂತೋಷ ಬಡಿಗೇರ.ಗೌಡಪ್ಪ ಬಿರಾದಾರ ಹಾಗೂ ಇತರೆ ಸಿಬ್ಬಂದಿಗಳು ಈ ಕಾರ್ಯಾ ಚರಣೆಯಲ್ಲಿ ಭಾಗವಹಿಸಿದ್ದರು.

**ತಾಲೂಕ ವರದಿಗಾರರು:ಶಿವಪ್ಪ.ಬಿ.ಹರಿಜನ.ಇಂಡಿ**

## ಬಂಜಾರ ಯುವ ಜನತೆಯ ನಾಯಕತ್ವ ಮತ್ತು ಸಮಾಲೋಚನೆ ಕಾರ್ಯಕ್ರಮ




ಹೊಸಪೇಟೆ : ನಗರದ ಬುದ್ಧ ಬಸವ ಭವನದಲ್ಲಿ,ಬಂಜಾರ ಯುವ ಜನತೆಯ ನಾಯಕತ್ವ ಮತ್ತು ಸಮಾಲೋಚನೆ ಹಾಗೂ ಸವಾಲುಗಳ ಕಾರ್ಯಕ್ರಮ ಜರುಗಿತು.

ಶ್ರೀ. ಹೀರಾಲಾಲ್ ನಾಯ್ಕ್ ಖಈಖ. ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಗಳು ಬಳ್ಳಾರಿ ವೃತ್ತ ಮತ್ತು ವೇದಿಕೆಯ ಗಣ್ಯರಾದ ಶ್ರೀ ಡಾ "ಗಿರೀಶ್ ಮೂಡ್ ಮತ್ತು ಡಾಕ್ಟರ್ ಶಂಕರ್ ನಾಯ್ಕ್ ಶ್ರೀ ಹರೀಶ್ ಲಮಾಣಿ ಮತ್ತು ಮುಖ್ಯ ಅತಿಥಿಯಾಗಿ ಕಾವ್ಯ ರಾಣಿ ಏಂಖ ಮತ್ತು ಆನಂದ್ ಚವ್ಹಾಣ್ ರವರೆಲ್ಲರೂ ಸೇರಿ ಶ್ರೀ ಸೇವಾಲಾಲರ ಮತ್ತು ಬಾಬಾ ಸಾಹೇಬ್ ಅಂಬೇಡ್ಕರ್ ರವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಹಾಗೂ ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ.ಡಾ.ಶಂಕರ್ ನಾಯ್ಕ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ವಿಜಯನಗರ ರವರು ತಮ್ಮ ಬಾಲ್ಯದ ಜೀವನವನ್ನ ಎಲ್ಲರ ಜೊತೆ ಮೆಲುಕು ಹಾಕಿದರು ಮತ್ತು ಬಂಜಾರಾ ಸಮುದಾಯಕ್ಕೆ ಸೇರಿದ ಎಲ್ಲಾ ಯುವಕರು ಮತ್ತು ಯುವತಿಯರು ಮೊದಲು ಕಡ್ಡಾಯವಾಗಿ ಶಿಕ್ಷಣವನ್ನು ಸರಿಯಾಗಿ ಪಡೆಯಬೇಕು. ಹೋರಾಟಗಾರರು ಇನ್ನೊಬ್ಬರ ಟೀಕೆ ಟಿಪ್ಪಣಿಗಳನ್ನು ಯೋಚಿಸದೆ ಸಮಾಜದ ಪರವಾಗಿ ಕೆಲಸ ಮಾಡಬೇಕು ಎಂದರು.

ಡಾ.ಆನಂದ್ ಚವಾಣ್ ರವರು ಮಾತನಾಡಿ ಯುವಜನತೆ ತಮ್ಮ ನಿರ್ಧಿಷ್ಟ ಗುರಿಯನ್ನು ಮುಟ್ಟಬೇಕಾದರೆ ತಾವು ತೊಡಗಿಸಿ ಕೊಳ್ಳಬೇಕಾದ ಅಂಶಗಳು ಮತ್ತು ತಂದೆ ತಾಯಿಯರ ಗುರಿಯನ್ನು ಮಕ್ಕಳು ಸಾಧಿಸಬೇಕು, ಜೀವನದಲ್ಲಿ ಪ್ರಮುಖವಾಗಿ ನಡೆದು ಬಂದ ಹಾದಿಯನ್ನ ಎಂದಿಗೂ ಮರೆಯಬಾರದು,ಗುರಿ ಸಾಧಿಸಿ ಯಶಸ್ವಿಯಾದ ಮೇಲೆ ಇನ್ನೊಬ್ಬರಿಗೆ ದಾರಿ ದೀಪವಾಗಬೇಕು ಯುವಕರ ಜವಾಬ್ದಾರಿಗಳ ಬಗ್ಗೆ ಮತ್ತು ಸಮಗ್ರ ಶಿಕ್ಷಣದ ಕುರಿತಂತೆ ಮಾತನಾಡಿದರು.

ಕಾವ್ಯ ರಾಣಿ ಸಹಾಯಕ ಆಯುಕ್ತರು ಕೊಪ್ಪಳ (ಏಂಖ), ಪಬ್ಲಿಕ್ ಪ್ರಾಸಿಕ್ಯೂಟರ್ ಆದ ಶ್ರೀಯುತ ಹರೀಶ್ ಲಮಾಣಿ, ಡಾ.ಗಿರೀಶ್ ಮೂಡ್ ಸಮಾಜದ ಮತ್ತು ಶಿಕ್ಷಣದ ಏಳಿಗೆಯ ಕುರಿತು ಮಾತನಾಡಿದರು.

ಈ ಸಂದರ್ಭದಲ್ಲಿ ಗಿರೀಶ್ ಡಿ.ಆರ್, ಅರುಣ್ ರಾಥೋಡ್, ಕಲ್ಲೇಶ್ ನಾಯ್ಕ್, ಲಕ್ಷ್ಮಣ ರಾಮಾವತ್, ರಾಮಜಿ ನಾಯ್ಕ್ ಹೊಸಪೇಟೆ, ಚಂದ್ರಶೇಖರ, ಕೆ ಪಿ ನಾಯ್ಕ್, ಅಂಜನಿ ನಾಯ್ಕ್, ಅರ್ಜುನ್ ನಾಯ್ಕ್ . ಕೃಷ್ಣ ಜಾಧವ್, ರಾಜಾನಾಯ್ಕ್, ರವಿ ನಾಯ್ಕ್, ಮಂಜು ನಾಯ್ಕ್, ಈಶ್ವರ್ ನಾಯ್ಕ್, ಲೋಲೇಶ್ ನಾಯ್ಕ್,, ಗೋಪಿ ನಾಯ್ಕ್, ಪ್ರಕಾಶ್ ನಾಯ್ಕ್, ವಿನೋದ್ ಕುಮಾರ್ ನಾಯ್ಕ ,ನಾಗರಾಜ್ ನಾಯ್ಕ್ ಹಾಗೂ ಅನೇಕ ಸಂಘಟನೆಗಳ ಪದಾಧಿಕಾರಿಗಳು, ರೇಷ್ಮಾ ಬಾಯಿ,ಅಲೋಕ್ ನಾಯ್ಕ್,ಕುಮಾರ್ ನಾಯ್ಕ ಟಿ ಹನುಮಾನಾಯ್ಕ್ ,ಶಿವಕುಮಾರ್ ನಾಯ್ಕ್ ಇತರರಿದ್ದರು.

ತಾಲೂಕ ವರದಿಗಾರರು:ಮಾಲತೇಶ್.ಶೆಟ್ಟರ್. ಹೊಸಪೇಟೆ

## ಬಾಲಕಿಯರಿಗೆ ಅಪರಾಧ ತಡೆ ಅರಿವು ಮೂಡಿಸುವ ಕಾರ್ಯಕ್ರಮ



ಕಮಲಾಪುರ : ಹೊಸಪೇಟೆ ವ್ಯಾಪ್ತಿಗೆ ಬರುವ ಕಮಲಾಪುರದ ಬಾಲಕಿಯರ ಪ್ರೌಢ ಶಾಲೆಯಲ್ಲಿ ಮತ್ತು ಅಪರಾಧ ತಡೆ ಮಾಸಾಚರಣೆ ಅಂಗವಾಗಿ ಬಸ್ ನಿಲ್ದಾಣದ, ಅಂಬೇಡ್ಕರ್ ಸರ್ಕಲ್, ಮತ್ತು ಶ್ರೀ ಕೃಷ್ಣ ದೇವರ ಸರ್ಕಲ್ ನಲ್ಲಿ ಅಪರಾಧಗಳ ಬಗ್ಗೆ ಅರಿವು ಮೂಡಿಸಲಾಯಿತು.

ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢ ಶಾಲೆಯಲ್ಲಿ ಈ ಕುರಿತು ಪಿಎಸ್ಐ ಜಯಲಕ್ಷ್ಮಿ ಮಾತನಾಡಿ ಪ್ರತಿಯೊಂದು ಅಪರಾಧಗಳನ್ನು ಪೊಲೀಸರೇ ತಡೆ ಗಟ್ಟಲು ಆಗುವುದಿಲ್ಲ, ನಮ್ಮ ಜೊತೆಗೆ ಸಾರ್ವಜನಿಕರು ಕೈಜೋಡಿಸಿ ಸಹಕಾರ ನೀಡಬೇಕು ಎಂದು ಮನವಿ ಮಾಡುತ್ತಾ ಯಾವುದೇ ಆಮಿಷಗಳಿಗೆ ಬಲಿಯಾಗದೆ ಜಾಗೃತರಾಗಬೇಕು.ಅನುಮಾನ ಬಂದಲ್ಲಿ 112 (ಇಖಖಖ )ಗೆ ಕರೆ ಮಾಡಬೇಕು ಅಥವಾ ನೇರವಾಗಿ ಪೊಲೀಸ್ ಸ್ಟೇಷನ್ ಗೆ ಬಂದು ತಿಳಿಸಬೇಕು. ಮುಖ್ಯವಾಗಿ ಶಾಲಾ ವಿದ್ಯಾರ್ಥಿನಿಯರಿಗೆ ಯಾರಾದರೂ ಅಪರಿಚಿತರು ಚಾಕ್ಲೇಟ್ ಕೊಟ್ಟರೆ ತಿನ್ನಬಾರದು, ಹಾಗೂ ಯಾವುದಾದರೂ ತಿನ್ನುವ ಆಹಾರ ಕೊಟ್ಟರೂ ಕೂಡ ತಿನ್ನಬಾರದು. ಇದಲ್ಲದೆ ಎಲ್ಲಿಯಾದರೂ ಪ್ರಯಾಣಿಸುವಾಗ ನಿಮ್ಮ ಒಡವೆಗಳನ್ನು ಮೈಯಲ್ಲಿ ಹಾಕಿ ಕೊಳ್ಳಬೇಕು ಅದನ್ನು ಬಿಟ್ಟು ವೆನಿಟಿ ಬ್ಯಾಗ್ ನಲ್ಲಿ ಇಟ್ಟುಕೊಂಡರೆ ಕಳ್ಳತನ ಆಗುವ ಸಂಭವ ಇರುತ್ತದೆ. ಇನ್ನು ನಿಮ್ಮ ಸಂಬಂಧಿಕರು ಚಿಕ್ಕ ವಯಸ್ಸಿನಲ್ಲೇ ಮದುವೆಗೆ ಒತ್ತಾಯಿಸಿದರೆ ಕೂಡಲೆ ನಮಗೆ ತಿಳಿಸಬೇಕು ಎಂದರು. ಕಾರಣ ಹೆಣ್ಣಿಗೆ 18 ರ ನಂತರ ಗರ್ಭಕೋಶ ಬೆಳೆಯುತ್ತದೆ ಆಗ ಮದುವೆ ಯಾಗುವುದು ಸೂಕ್ತ ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಕಮಲಾಪುರ ಪೊಲೀಸ್ ಠಾಣೆಯ ಪಿಎಸ್ಐ ಜಯಲಕ್ಷ್ಮಿ, ಎಎಸ್ಐ ಜಿ ತಿಪ್ಪೇಸ್ವಾಮಿ, ಪೊಲೀಸ್ ಠಾಣೆ ಸಿಬ್ಬಂದಿಗಳು ಹಾಗೂ ಆಟೋ ಚಾಲಕರ ಸಂಘದ ಅಧ್ಯಕ್ಷರಾದ ಕೃಷ್ಣ ಇತರರಿದ್ದರು.

**ತಾಲೂಕ ವರದಿಗಾರರು: ಮಾಲತೇಶ್.ಶೆಟ್ಟರ್. ಹೊಸಪೇಟೆ**

## ಮಾರಮ್ಮನಹಳ್ಳಿಯಲ್ಲಿ–ಐದು ಮರಿಗೆ ಜನ್ಮ ನೀಡಿದ ಮೇಕೆ

ಮಾರಮ್ಮನಹಳ್ಳಿ : ಐದು ಮರಿ ಹಾಕಿದ ಅಪರೂಪದ ಮೇಕೆ ಕೂಡ್ಲಿಗಿ ತಾಲೂಕಿನ ಮಾರಮ್ಮನಹಳ್ಳಿ ಗ್ರಾಮದಲ್ಲಿ 5 ಮರಿಗಳಿಗೆ ಜನ್ಮ ನೀಡಿದ ಮೇಕೆ.



ಕೂಡ್ಲಿಗಿ ತಾಲೂಕಿನ ಮಾರಮ್ಮನಹಳ್ಳಿ ಗ್ರಾಮದ ಪೂಜಾರಿ ಚಿನ್ನಾಲಿಂಗಯ್ಯನವರ ಚಿನ್ನಮುತ್ತಯ್ಯ ಎಂಬುವವರಿಗೆ ಸೇರಿದ ಮೇಕೆಯೊಂದು ಐದು ಮರಿಗಳಿಗೆ ಜನ್ಮ ನೀಡಿದ ಅಪರೂಪ ಘಟನೆ ನಡೆದಿದೆ.

ಪ್ರತಿ ಸಲ 1–2 ಮರಿಗಳಿಗೆ ಜನ್ಮ ನೀಡುತ್ತಿದ್ದ ಮೇಕೆ ಈ ಬಾರಿ ಐದು ಮರಿಗೆ ಜನ್ಮ ನೀಡಿದೆ,ಇಷ್ಟೊಂದು ಮರಿಗಳಿಗೆ ಜನ್ಮ ನೀಡಿರುವುದು ಅಪರೂಪದ. ಸಾಮಾನ್ಯವಾಗಿ ಮೇಕೆಗಳು ಮೂರರಿಂದ ನಾಲ್ಕು ಮರಿಗಳಿಗೆ ಜನ್ಮ ನೀಡುತ್ತವೆ. ಅದರಲ್ಲೂ ಹೆಣ್ಣು ಮತ್ತು ಗಂಡು ಮರಿಗಳು ಇರುತ್ತವೆ. ಆದರೆ ನಮ್ಮ ಮೇಕೆ ಐದು 2 ಹೆಣ್ಣು 3 ಗಂಡು ಮರಿಗಳಿಗೆ ಜನ್ಮ ನೀಡಿದ್ದು ವಿಶೇಷ ಅಂತಾರೆ ಚಿನ್ನಮುತ್ತಯ್ಯ.

ಇನ್ನು ಮೇಕೆಯೊಂದು ಐದು ಮರಿಗಳಿಗೆ ಜನ್ಮ ನೀಡಿದ ವಿಷಯ ತಿಳಿದು ಗ್ರಾಮದ ಜನರು ಮಾತ್ರವಲ್ಲ, ಸುತ್ತ ಮುತ್ತಲಿನ ಅನೇಕ ಗ್ರಾಮದ ಜನರು ಮೇಕೆ ವೀಕ್ಷಣೆಗೆ ಬರುತ್ತಿದ್ದಾರೆ.ನಾಲ್ಕು ಮರಿಗಳು ಆರೋಗ್ಯದಿಂದ ಇವೆ,ಒಂದು ಮರಿ ಮರಣ ಹೊಂದಿದೆ ಎನ್ನುತ್ತಾರೆ ಗ್ರಾಮದ ಗ್ರಾಮಸ್ಥರು ಬೋಮ್ಮಲಿಂಗಯ್ಯ.

ಹೋಬಳಿ ವರದಿಗಾರರು: ಕೆ.ಎಸ್.ವೀರೇಶ್.ಕಾನಾ ಹೊಸಹಳ್ಳಿ

## ಇಂದು ಧನ್ನೂರು ಗ್ರಾಮ ಪಂಚಾಯಿತಿ ನೂತನ ಕಟ್ಟಡ ಹಾಗೂ ಸಮುದಾಯ ಭವನ ಉದ್ಘಾಟನೆ

ಧನ್ನೂರು : ಹುನಗುಂದ ತಾಲೂಕಿನ ಸಮೀಪದ ಧನ್ನೂರ ಗ್ರಾಮದಲ್ಲಿ ಡಿ.21 ರಂದು ಗುರುವಾರ ಬೆಳಿಗ್ಗೆ 11.ಗಂಟೆಗೆ ಗ್ರಾಮ ಪಂಚಾಯತ ನೂತನ ಕಟ್ಟಡ ಹಾಗೂ ಸಮುದಾಯ ಭವನ ಉದ್ಘಾಟನೆ ಸಮಾರಂಭ ಜರುಗಲಿದೆ.



ಕೂಡಲ ಸಂಗಮದ ಪಂಚಮಸಾಲಿ ಪೀಠದ ಜಗದ್ಗುರು ಬಸವಜಯ ಮೃತ್ಯುಂಜಯ ಮಹಾಸ್ವಾಮಿಗಳು ಮತ್ತು ಬಿಲ್ ಕೆರೂರದ ಸಿದ್ದಲಿಂಗ ಶಿವಾಚಾರ್ಯರು ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಲಿದ್ದಾರೆ.ಶಾಸಕ ವಿಜಯಾನಂದ ಕಾಶಪ್ಪನವರ ಅಧ್ಯಕ್ಷತೆಯನ್ನು ವಹಿಸಿಕೊಂಡು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು.ಬಾಗಲಕೋಟ ಉಸ್ತುವಾರಿ ಹಾಗೂ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪೂರ ಜ್ಯೋತಿ ಬೆಳಗಿಸಲಿದ್ದು.ಗ್ರಾಂ.ಪಂ ಅಧ್ಯಕ್ಷೆ ಸಂಗಮ್ಮ ಶಿರಹಟ್ಟಿ ಉಪಸ್ಥಿತಿಯನ್ನು ವಹಿಸಲಿದ್ದಾರೆ.ಸಂಸದ ಪಿ.ಸಿ.ಗದ್ದಿಗೌಡರ,ವಿಧಾನ ಪರಿಷತ್ ಸದಸ್ಯರಾದ ಸುನೀಲಗೌಡ ಪಾಟೀಲ, ಪಿ.ಎಚ್. ಪೂಜಾರಿ, ಹನಮಂತ ನಿರಾಣಿ ,ಪ್ರಕಾಶ ಹುಕ್ಕೇರಿ,ಗ್ರಾ.ಪಂ ಉಪಾಧ್ಯಕ್ಷ ಎನ್.ಕೆ.ಮುಲ್ಲಾ,ಜಿಲ್ಲಾ ಉಸ್ತುವಾರಿ ಕಾರ್ಯದರ್ಶೀ ಮೊಹಮ್ಮೊದ ಮೊಹಿಸಿನ್,ಜಿಲ್ಲಾಧಿಕಾರಿ ಜಾನಕಿ,ಕೆ.ಎಂ..ಜಿ.ಪಂ ಸಿಇಓ ಶಶಿಧರ ಕುರೇರ,ಎಸ್.ಪಿ ಅಮರನಾಥರಡ್ಡಿ,ವಾಯ್,ಜಿ.ಪಂ ಉಪ ಕಾರ್ಯದರ್ಶಿ ಅಮರೇಶ ನಾಯಕ,ಮುಖ್ಯ ಯೋಜನಾಧಿಕಾರಿ ಪುನಿತ್.ಬಿ.ಆರ್.ತಾ.ಪಂ ಇ.ಓ ಮುರಳೀಧರ್ ದೇಶಪಾಂಡೆ,ತಾ.ಪಂ ಎಡಿ ಮಹಾಂತೇಶ ಕೋಟಿ ಹಾಗೂ ಗ್ರಾ.ಪಂ ಸರ್ವ ಸದಸ್ಯರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ತಾಲೂಕ ವರದಿಗಾರರು: ಮಲ್ಲಿಕಾರ್ಜುನ.ಎಂ.ಬಂಡರಗಲ್ಲ**

# 6ನೇ ತರಗತಿ ಪ್ರವೇಶ ಪರೀಕ್ಷೆಗೆ ಅರ್ಜಿ

ಬಾಗಲಕೋಟೆ : ಮೊರಾರ್ಜಿ ದೇಸಾಯಿ, ಕಿತ್ತೂರ ರಾಣಿ ಚೆನ್ನಮ್ಮ, ಅಟಲ್ ಬಿಹಾರಿ ವಾಜಪೇಯಿ, ಡಾ.ಬಿ.ಆರ್. ಅಂಬೇಡ್ಕರ್, ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆಗಳಿಗೆ 2024-25ನೇ ಸಾಲಿನ 6ನೇ ತರಗತಿಗೆ ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಲು ಪ್ರತಿಭಾನ್ವಿತ ಬಡ ವಿದ್ಯಾರ್ಥಿಗಳಿಂದ ಪ್ರವೇಶ ಪರೀಕ್ಷೆಗೆ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಫೆಬ್ರವರಿ 18 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1ರ ವರೆಗೆ ನಡೆಯಲಿರುವ ಪ್ರವೇಶ ಪರೀಕ್ಷೆಗೆ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಈಗಾಗಲೇ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಗಳನ್ನು ಹತ್ತಿರದ ವಸತಿ ಶಾಲೆಯಲ್ಲಿ ಡಿಸೆಂಬರ 31 ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಮೀಪದ ವಸತಿ ಶಾಲೆಯ ಪ್ರಾಂಶುಪಾಲರನ್ನು ಹಾಗೂ http://kea.kar.nic.in ಮತ್ತು http:// ಇಡಿಜ್ಹು.ಇಚಿಡಿ.ಟಿಛಿ.ಟಿ ವೆಬ್ ಸೈಟ್‌ನಿಂದ ಪಡೆದುಕೊಳ್ಳುವಂತೆ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಿಲ್ಲಾ ಮಟ್ಟದ ಯುವಜನೋತ್ಸವಕ್ಕೆ ಆಯ್ಕೆ

ಬಾಗಲಕೋಟೆ : ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು 2023-24ನೇ ಸಾಲಿನ ಜಿಲ್ಲಾ ಮಟ್ಟದ ಯುವಜನೋತ್ಸವ ಆಯ್ಕೆ ಮತ್ತು ಸಂಘಟನೆಯನ್ನು ಡಿಸೆಂಬರ 18 ರಂದು ಬೆಳಗ್ಗೆ 9 ಗಂಟೆಗೆ ನವನಗರದ ಸೆಕ್ಟರ ನಂ.38 ರಲ್ಲಿರುವ ಅಂಬೇಡ್ಕರ ಭವನ ನಡೆಸಲು ತಿರ್ಮಾನಿಸಲಾಗಿದೆ.

ಯುವಜನೋತ್ಸವ ಕಾರ್ಯಕ್ರಮದಲ್ಲಿ 15 ರಿಂದ 29 ವರ್ಷದ ವಯೋಮಿತಿ ಒಳಗಿನ ಪುರುಷ, ಮಹಿಳೆ, ಯುವಕ, ಯುವತಿಯರಿಗಾಗಿ ಜನಪದ ನೃತ್ಯ (ತಂಡ) (ಕನ್ನಡ, ಆಂಗ್ಲ, ಹಿಂದಿ), ಜನಪದ ಗೀತೆ (ತಂಡ) (ಕನ್ನಡ, ಆಂಗ್ಲ, ಹಿಂದಿ), ಜನಪದ ನೃತ್ಯ (ವೈಯಕ್ತಿಕ) (ಕನ್ನಡ, ಆಂಗ್ಲ, ಹಿಂದಿ), ಜನಪದ ಗೀತೆ (ವೈಯಕ್ತಿಕ) (ಕನ್ನಡ, ಆಂಗ್ಲ, ಹಿಂದಿ), ಕಥೆ ಬರೆಯುವುದು (ವೈಯಕ್ತಿಕ) ಸ್ಟೋರಿ ರೈಟಿಂಗ್ (1000 ಪದಗಳಿಗೆ ಮೀರದಂತೆ (ಕನ್ನಡ, ಆಂಗ್ಲ, ಹಿಂದಿ), ಪೋಸ್ಟರ್ ಮೇಕಿಂಗ್ (ಭಿತ್ತಿ ಪತ್ರ ತಯಾರಿಕೆ) ವೈಯಕ್ತಿಕ, ಘೋಷಣೆ (ಹಿಂದಿ & ಆಂಗ್ಲ), ಛಾಯಾ ಚಿತ್ರಣ (ವೈಯಕ್ತಿಕ) ಸ್ಪರ್ಧೆಗಳನ್ನು ನಡೆಸಲಾಗುವುದು. ಎಪ್ರೀಲ್ 1, 2024 ಕ್ಕೆ ಸ್ಪರ್ಧಾಳುಗಳ ವಯಸ್ಸು 29 ಕ್ಕೆ ಮೀರಿರಬಾರದು.

ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ, ವೈಯಕ್ತಿಕ ಮತ್ತು ಗುಂಪು ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದವರನ್ನು ಇಲಾಖಾ ವೆಚ್ಚದಿಂದ ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮಕ್ಕೆ ನಿಯೋಜಿಸಲಾಗುವುದು.

ಜಿಲ್ಲಾ ಮಟ್ಟದ ಯುವಜನೋತ್ಸವ ಸ್ಪರ್ಧಾಳುಗಳಿಗೆ ಊಟ ಉಪಹಾರದ ವ್ಯವಸ್ಥೆ ಮಾಡಲಾಗಿದ್ದು, ಭಾಗವಹಿಸುವ ಸ್ಪರ್ಧಾಳುಗಳು ನೊಂದಣಿ ಸಮಯದಲ್ಲಿ ಆಧಾರ ಕಾರ್ಡ ಕಡ್ಡಾಯವಾಗಿ ಹಾಜರುಪಡಿಸುವುದು. ಹೆಚ್ಚಿನ ಮಾಹಿತಿಗಾಗಿ ದೂಸಂ. 08354-235896, 9945284771 & 9731352524ಗೆ ಸಂಪರ್ಕಿಸುವಂತೆ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮುಂದುವರೆದ ಅತಿಥಿ ಉಪನ್ಯಾಸಕ ಪ್ರತಿಭಟನೆ: ಬೆಂಬಲ ನೀಡಿದ ಎಆಯ್‌ಡಿಎಸ್‌ಓ
# ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆವದಗಿಸಿ ಖಾಯಂಮಾತಿ ನಿಡಬೇಕು: ಶಿಲ್ಪಾ ಬಿ.ಕೆ

ಬಾಗಲಕೋಟೆ: ಕರ್ನಾಟಕ ರಾಜ್ಯದ ಶಿಕ್ಷಣ ಗುಣಮಟ್ಟ ಹೆಚ್ಚಾಗಲು, ಕೌಶಲ್ಯ ಶಿಕ್ಷಣ ಕ್ರಿಯಾಶೀಲವಾಗಿ ಕಾರ್ಯರೂಪಕ್ಕೆ ಬರಬೇಕಾದರೆ, ವಿದ್ಯಾರ್ಥಿಗಳ ಬೌದ್ಧಿಕ ಶಿಕ್ಷಣಕ್ಕೆ ಶಕ್ತಿ ತುಂಬಬೇಕಾದರೆ ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆವದಗಿಸಿ ಖಾಯಂಮಾತಿ ಮಾಡಬೇಕು ಎಂದು ಎಆಯ್‌ಡಿಎಸ್‌ಓ ರಾಜ್ಯ ಕಾರ್ಯಕಾರಣಿ ಸಮಿತಿ ಸದಸ್ಯೆ ಶಿಲ್ಪಾ ಬಿ.ಕೆ. ಹೇಳಿದರು.

ಅವರು ಜಿಲ್ಲಾ ಆಡಳಿತ ಭವನ ಮುಂದೆ ನಡೆಯುತ್ತಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಹೋರಾಟಕ್ಕೆ ಬೆಂಬಲ ಸೂಸಚಿಸಿ ಮಾತನಾಡಿದರು.

ಕರ್ನಾಟಕ ರಾಜ್ಯದಲ್ಲಿ ಉತ್ತಮವಾದ ಶಿಕ್ಷಣದ ಗುಣಮಟ್ಟ ಹೆಚ್ಚಾಗಲು, ಕೌಶಲ್ಯ ಶಿಕ್ಷಣ ಕ್ರಿಯಾಶೀಲವಾಗಿ ಕಾರ್ಯರೂಪಕ್ಕೆ ಬರಬೇಕಾದರೆ, ಅತಿಥಿ ಉಪನ್ಯಾಸಕರು ಅವಶ್ಯಕತೆ ಇದ್ದು ವಿದ್ಯಾರ್ಥಿಗಳ ಬೌದ್ಧಿಕ ಶಿಕ್ಷಣಕ್ಕೆ ಶಕ್ತಿ ತುಂಬಲು ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆವದಗಿಸಿ ಖಾಯಂಮಾತಿ ಮಾಡಬೇಕು ಎಂದರು.

ಎಆಯ್‌ಡಿಎಸ್‌ಓ ವಿಜಯಪುರ ಜಿಲ್ಲಾ ಕಾರ್ಯದರ್ಶಿ ಕಾವೇರಿ ರಜಪೂತ ಅವರು ಬೆಂಬಲ ನೀಡಿ, ಮಾತನಾಡಿ ನಮ್ಮ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಬಹು ದಿನಗಳಿಂದ ಸೇವೆ ಸಲ್ಲಿಸುತ್ತಿರುವ ಎಲ್ಲಾ ಅತಿಥಿ ಉಪನ್ಯಾಸಕರಿಗೆ ಸರ್ಕಾರ ತಕ್ಷಣವೇ ಸೇವಾ ಭದ್ರತೆ ನೀಡಿ ಖಾಯಮಾತಿ



ಮಾಡಬೇಕು.

ಇದರಿಂದ ಅತಿಥಿ ಉಪನ್ಯಾಸಕರು ಪದವಿ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯವಾಗುತ್ತದೆ ಎಂದರು.

ಜಮಖಂಡಿ ಸ.ಪ್ರ.ದ ಮಹಿಳಾ ಕಾಲೇಜು ಸಾವಳಗಿ ಸ.ಪ್ರ.ದ ಕಾಲೇಜು ಅತಿಥಿ ಉಪನ್ಯಾಸಕರ ಸೇರಿದ ಜಿಲ್ಲೆಯ ಅತಿಥಿ ಉಪನ್ಯಾಸಕರು ಹೋರಾಟದಲ್ಲಿ ಪಾಲ್ಗೊಂಡಿದ್ದರು. ಜಮಖಂಡಿ ತಾಲೂಕ ಅಧ್ಯಕ್ಷರ ಬಸವರಾಜ ಪಾಟೀಲ, ಪ್ರೊ.ಬಬಲಿ,

ರಾಜ್ಯ ಅತಿಥಿ ಉಪನ್ಯಾಸಕರ ಸಂಘದ ಸದಸ್ಯರಾದ ಡಾ.ಚಂದ್ರಶೇಖರ ಕಾಳನ್ನವರ, ಪ್ರೊ.ಸಂಗಮೇಶ ಬ್ಯಾಳಿ, ಪ್ರೊ.ನಾಗಯ್ಯ ಜ್ಯೋತೆಪ್ಪನವರ, ಸುನಿಲ್ ಮಠಪತಿ ಡಾ.ಸಂತೋಷ್ ಕಾಳನ್ನವರ್ ,ಜಗದೀಶ್ ಮೊಗ್ನೂರ್, ಎಂ ವೈ ಬಡಿಗೇರ್ ,ಡಾ. ಪಿ ಕೆ. ಕಾರಬರಿ, ಪ್ರೊ. ಕರಿಗೌಡರ ಮುಂತಾದವರು ಉಪಸ್ಥಿತರಿದ್ದರು.

# ಕೆನರಾ ಬ್ಯಾಂಕ್: 95 ಸ್ವ-ಸಹಾಯ ಗುಂಪುಗಳಿಗೆ ಸಾಲ ವಿತರಣೆ

ಬಾಗಲಕೋಟೆ : ಕೆನರಾ ಬ್ಯಾಂಕ್ ಶಾಖೆಗಳ ಮೂಲಕ ಜಿಲ್ಲೆಯ 95 ಸ್ವ-ಸಹಾಯ ಗುಂಪುಗಳಿಗೆ ಒಟ್ಟು 195 ಲಕ್ಷ ರೂ.ಗಳ ಸಾಲವನ್ನು ವಿತರಿಸಲಾಗಿದೆ ಎಂದು ಕೆನರಾ ಬ್ಯಾಂಕ್‌ನ ಕ್ಷೇತ್ರೀಯ ವ್ಯವಸ್ಥಾಪಕಿ ಕೆ.ಆರ್.ಶೈಲಜಾ ಹೇಳಿದರು.

ಇಲಕಲ್ಲ ನಗರದ ಡಾ.ಬಿ. ಆರ್.ಅಂಬೇಡ್ಕರ ಭವನದಲ್ಲಿ ಜಿಲ್ಲಾ ಪಂಚಾಯತ, ಇಲಕಲ್ಲ ತಾಲೂಕಾ ಪಂಚಾಯತ ಸಹಯೋಗದಲ್ಲಿ ಹಮ್ಮಿಕೊಂಡ ಸ್ವ-ಸಹಾಯ ಗುಂಪುಗಳಿಗೆ ಹಮ್ಮಿಕೊಂಡ ಸಾಲ ಮೇಳ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಈಗಾಗಲೇ 95 ಸ್ವ-ಸಹಾಯ ಗುಂಪುಗಳಿಗೆ ಸಾಲ ವಿತರಿಸಾಗಿದ್ದು, ಇನ್ನುಳಿದ ಎನ್.ಆರ್.ಎಲ್.ಎಂ ಸ್ವ-ಸಹಾಯ ಸಂಘಗಳಿಗೆ ಸಾಲ ವಿತರಿಸಲು ಕೆನರಾ ಬ್ಯಾಂಕ್ ಬದ್ದವಾಗಿದೆ ಎಂದು ತಿಳಿಸಿದರು.




ಕಾರ್ಯಕ್ರಮದಲ್ಲಿ ಹುನಗುಂದ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಮುರಳೀಧರ ದೇಶಪಾಂಡೆ,

ಮುಧೋಳ ತಾ. ಪಂ ಕಾರ್ಯನಿರ್ವಾಹಕ ಅಧಿ ಕಾರಿ ಸಂಜೀವ ಹಿಪ್ಪರಗಿ, ಎನ್. ಆರ್. ಎಲ್.ಎಂ ಜಿಲ್ಲಾ ವ್ಯವಸ್ಥಾ ಪಕಿ ಅನ್ನಪೂರ್ಣ ಸೇರಿದಂತೆ ಕೆನರಾ ಶಾಖೆಯ ವ್ಯವಸ್ಥಾಪಕರು, ಸ್ವ-ಸಹಾಯ ಗುಂಪುಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

# ಸಂಗೀತದಿಂದ ಮಾನಸಿಕ ನೆಮ್ಮದಿ ಸಾಧ್ಯ



ಮಹಾಲಿಂಗಪುರ: ಸಂಗೀತ ಎನ್ನುವುದು ಮನಸ್ಸಿಗೆ ಮುದ ನೀಡುವ ದಿವ್ಯ ಔಷಧದಂತಿದ್ದು , ಸಂಗೀತ ಆಲಿಸುವುದರ ಮೂಲಕ ಮಾನಸಿಕ ನೆಮ್ಮದಿ ಕಾಣಬಹುದಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತು ಮಹಾಲಿಂಗಪುರ ವಲಯ ಘಟಕದ ಅಧ್ಯಕ್ಷ ಬಸವರಾಜ ಮೇಟಿ ಹೇಳಿದರು.

ಪಟ್ಟಣದ ಗಿರಿಮಲ್ಲೇಶ್ವರ ಮಾಧವಾನಂದ ಆಶ್ರಮದಲ್ಲಿ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗಿರಿಮಲ್ಲೇಶ್ವರ ಮಹಾರಾಜರ ಸಂಘದಿಂದ ಭಾನುವಾರ ಹಮ್ಮಿಕೊಂಡ ಗಾನ ಸೌರಭ ಸಂಗೀತ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಂಗೀತ ಮತ್ತು ಕಲೆ ಉಳಿಯಬೇಕಾದರೆ ಇಂದಿನ ಮಕ್ಕಳು ಮೊಬೈಲ್ ಬಳಕೆಗೆ ಒಳಗಾಗದೇ ಸಂಗೀತದಲ್ಲಿ ಆಸಕ್ತಿ ತೋರಬೇಕು. ಮಕ್ಕಳಿಗೆ ಚಿಕ್ಕಂದಿನಿಂದಲೇ ಶಿಕ್ಷಣ ಜತೆಗೆ ಸಂಗೀತ ಕಲಿಕೆ ಅತ್ಯವಶ್ಯ ಎಂದರು.

ಪುರಸಭೆ ಮಾಜಿ ಅಧ್ಯಕ್ಷ ಜಿ. ಎಸ್. ಗೊಂಬಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಗೀತ ಎನ್ನುವುದು ನಮ್ಮೆಲ್ಲರಲ್ಲೂ ಹಾಸು ಹೊಕ್ಕಾಗಿದೆ. ನಮ್ಮ ಇಡೀ ದೇಹ ಲಯಕ್ಕೆ , ಸ್ವರಕ್ಕೆ ಪೂರಕ ಸಂಗತಿಗಳನ್ನು ಹೊಂದಿದೆ. ಹೀಗಾಗಿ ನಮಗೆ ತಾಳ, ಲಯದಲ್ಲಿ ವ್ಯತ್ಯಾಸವಾದಾಗ ನಮಗೆ ಅದರ ಅರಿವಾಗುತ್ತದೆ. ಸಂಗೀತಕ್ಕೆ ಭಾಷೆ ಬೇಕಿಲ್ಲ. ಎಲ್ಲ ಸಂಸ್ಕಾರಗಳಿಗೂ ಸಂಗೀತ ತಾಳ ಹಿನ್ನೆಲೆಯಾಗಿ ಬಂದಿದೆ ಎಂದರು.

ಕಪ್ಪಲಗುದ್ದಿಯ ಅಂಧ ಕಲಾವಿದ ಕುಮಾರ ಬಡಿಗೇರ ಸುಗಮ ಸಂಗೀತ ಹಾಗೂ ಮುಧೋಳದ ಹಿಂದುಸ್ತಾನಿ ಗಾಯಕಿ ಶ್ರದ್ಧಾ ಕಾಖಂಡಕಿ ಶಾಸ್ತ್ರೀಯ ಸಂಗೀತ ಪ್ರಸ್ತುತ ಪಡಿಸಿದರು. ಮಹಾದೇವ ಕದ್ದಿಮನಿ, ಚನ್ನಮಲ್ಲ ಕರಡಿ, ಭೀಮಶಿ ನೇಗಿನಾಳ ಉಪಸ್ಥಿತರಿದ್ದರು.

# ಕಲ್ಯಾಣ ಕರ್ನಾಟಕದಲ್ಲಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ಪರಂಪರೆಗಳು ಶ್ರೇಷ್ಠ ಶ್ರೀಮಂತವಾಗಿವೆ: ಸಮ್ಮೇಳನಾಧ್ಯಕರು ಗುರಪ್ಪ ಪಾಟೀಲ್






ಯಾದಗಿರಿ : ಕಲ್ಯಾಣ ಕರ್ನಾಟಕದಲ್ಲಿ ಅಮೋಘವರ್ಷ ನೃಪತಂಗನ ಆಳ್ವಿಕೆಯಿಂದಲೂ ಇಲ್ಲಿನ ಭಾಷೆ ಸಾಂಸ್ಕೃತಿಕ ಪರಂಪರೆ ಉನ್ನತ ಶ್ರೇಣಿಯಲ್ಲಿದ್ದು ಸೀಮಂತವಾದ ನಾಡಾಗಿತ್ತು. ಈ ಭಾಗದ ಸಾಹಿತಿಗಳು ಬುದ್ಧಿಜೀವಿಗಳು ರಂಗಕರ್ಮಿಗಳು ದೇಶ ಮತ್ತು ರಾಜ್ಯಗಳಲ್ಲಿ ತಮ್ಮ ವಿಶಿಷ್ಟ ಸೇವೆಯ ಮೂಲಕ ಹೆಸರುವಾಸಿಯಾಗಿದ್ದಾರೆ. ಅನೇಕ ರಂಗಗಳಲ್ಲಿ ಕನ್ನಡ ಕರ್ನಾಟಕದ ಹೆಸರಿನ ಮುಂಚೂಣಿಯಲ್ಲಿ ಇರುವಂತೆ ಮಾಡಿದ್ದಾರೆ.

ಕನ್ನಡ ಭಾಷೆಯಲ್ಲಿನ ವೈವಿಧ್ಯತೆ ಮತ್ತು ಬೆಳವಣಿಗೆಗೆ ಕವಿ ಮತ್ತು ಸಾಹಿತಿಗಳ ಕೊಡುಗೆ ಅಪಾರವಿದೆ. ಅವರು ರಚಿಸಿದ ಸಾಹಿತ್ಯ ಮತ್ತು ಗೀತೆಗಳ ಮೂಲಕ ಕನ್ನಡ ಬಾಷೆಯಲ್ಲಿನ ಭಾವನೆಗಳ ಜೊತೆಗೆ ಕನ್ನಡಿಗರ ಮನಸ್ಸುಗಳು ಬೆರೆತಿರುವ ಕಾರಣದಿಂದ ಸ್ವಾಭಿಮಾನಿ ಕನ್ನಡಿಗರಾದ ನಾವುಗಳು ಸಂಸ್ಕೃತಿ ಮತ್ತು ಸಂಸ್ಕಾರದಲ್ಲಿ ಶ್ರೀಮಂತರಾಗಿದ್ದೇವೆ ಎಂದು ಕಲ್ಯಾಣ ಕರ್ನಾಟಕದ ಸಾಂಸ್ಕೃತಿಕ ಸಂಭ್ರಮದ ಎರಡನೇ ಸಮ್ಮೇಳನದ ಸರ್ವಾಧ್ಯಕ್ಷ ಹಿರಿಯ ರಂಗ ಕರ್ಮಿ ಗುರಪ್ಪ ಪಾಟೀಲ್ ಅವರು ಗೌರವ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಯಾದಗಿರಿಯ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಹೈದ್ರಬಾದ ಕರ್ನಾಟಕ ನಾಗರಿಕರ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಕಲ್ಯಾಣ ಕರ್ನಾಟಕ ಸಾಂಸ್ಕೃತಿಕ ಸಂಭ್ರಮದ 2ನೇ ಸಮ್ಮೇಳನದಲ್ಲಿ ಮಾತನಾಡುತ್ತಾ ರಾಜ್ಯದಲ್ಲಿ ಕನ್ನಡ ಬಾಷೆ, ನೆಲ, ಜಲ, ಸಾಹಿತ್ಯ, ಕಲೆ, ಸಂಸ್ಕೃತಿ ಸೇರಿದಂತೆ ಪರಿಸರ ಸಂಪನ್ಮೂಲಗಳು ಎಲ್ಲೆಡೆ ಸಮೃದ್ಧಿಯಾಗಿ ಹರಡಿಕೊಂಡಿದೆ. ಶರಣರು, ಕವಿಗಳು, ಸಾಹಿತಿಗಳು, ಕಲಾವಿದರು ಸೇರಿದಂತೆ ಕನ್ನಡ ಪ್ರೇಮಿಗಳು ಮತ್ತು ಹೋರಾಟಗಾರರ ಪರಿಶ್ರಮ ಮತ್ತು ಸಾಧನೆಯನ್ನು ಕನ್ನಡಿಗರಾದ ನಾವುಗಳು ಸ್ಮರಿಸಬೇಕಿದೆ. ಹಚ್ಚಹಸುರಿನ ಸುಂದರ ಬೆಟ್ಟ ಗುಡ್ಡಗಳ ನದಿಗಳು ಹರಿಯುವ ಸುಂದರ ಪರಿಸರದಲ್ಲಿ ಸಾಧು-ಸಂತರು, ಶಿವಶರಣರು, ಕವಿ-ಸಾಹಿತಿಗಳ ಸ್ವಾಭಿಮಾನದ ಸೇವೆಯಿಂದ ಕನ್ನಡ ನಾಡು ಎಂಬ ಹೆಸರಿಗೆ ಒಂದು ಧೀಮಂತ ಶಕ್ತಿಯಿದೆ. ಇಂತಹ ಸಮೃದ್ಧ ನಾಡಿನಲ್ಲಿ ಜನಿಸಿರುವುದು ಕನ್ನಡಿಗರ ಅದೃಷ್ಟವಾಗಿದೆ. ಇನ್ನೂ ಹೈದ್ರಬಾದ ಕರ್ನಾಟಕ ನಾಗರಿಕರ ವೇದಿಕೆಯಿಂದ ನಡೆಯುತ್ತಿರುವ ಕಲ್ಯಾಣ ಕರ್ನಾಟಕ ಸಾಂಸ್ಕೃತಿಕ ಸಂಭ್ರಮದ 2ನೇ ಸಮ್ಮೇಳನದಲ್ಲಿ ನಮ್ಮ ಕಲಬುರಗಿ ಜಿಲ್ಲೆಯ ಸಾಧಕರಿಗೆ ಗುರಿತಿಸಿ ರಾಜ್ಯ ಮಟ್ಟದ ಅಮೋಘವರ್ಷ ನೃಪತುಂಗ ಪ್ರಶಸ್ತಿ ಪ್ರಧಾನ ಮಾಡುತಿರುವುದು ಶ್ಲಾಘನೀಯವಾಗಿದೆ ಎಂದರು.

ರಂಗಭೂಮಿ ಹಿನ್ನೆಲೆ ಇರುವ ನನ್ನನ್ನು ಈ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿರುವುದು ಸಂತಸದ ವಿಚಾರ ಕಲ್ಯಾಣ ಕರ್ನಾಟಕದ ರಂಗಭೂಮಿ ಕ್ಷೇತ್ರಕ್ಕೆ ಹಗಲಿರುಳು ದುಡಿಯುತ್ತಿರುವ ಅನೇಕ ರಂಗಕರ್ಮಿಗಳಿಗೆ ಸರ್ಕಾರಗಳು ಪ್ರಶಸ್ತಿ ಹಾಗೂ ಅವಕಾಶಗಳನ್ನು ನೀಡಬೇಕೆಂದು ಆಗ್ರಹಿಸಿದರು.

ನನ್ನ ಪಾಪ ತೊಳದ ಪುಣ್ಯವಂತೆ ಸಾಮಾಜಿಕ ನಾಟಕದ 450ಕ್ಕೂ ಹೆಚ್ಚು ಪ್ರದರ್ಶನ ಕಂಡಿರುವುದು ಸಂತಸವನ್ನು ನೀಡಿದೆ. ನನ್ನನ್ನು ಸಮ್ಮೇಳನ ಅಧ್ಯಕ್ಷರನ್ನಾಗಿ ಗುರುತಿಸಿ ಆಯ್ಕೆ ಮಾಡಿದ ಈ ಸಂಸ್ಥೆಗೆ ನನ್ನ ವಂದನೆ ನನ್ನ ಹಾಗೆ ಎಲೆಯ ಮರೆಯ ಕಾಯಿಯ0ತಿರುವ ಪ್ರತಿಭೆಗಳಿಗೆ ಸಮಾಜ ಹಾಗೂ ಸರ್ಕಾರ ಮನ್ನಣೆ ನೀಡಬೇಕಿದೆ ಎಂದರು.

ಗ್ರಾಮೀಣ ಪ್ರದೇಶದಲ್ಲಿ ನಾಟಕಗಳಿಗೆ ಹೆಚ್ಚಿನ ಆದ್ಯತೆ ಇದೆ ಅದಕ್ಕೆ ರಂಗಭೂಮಿಗಾಗಿ ಸಮಾಜ ಮತ್ತು ಸಾರ್ವಜನಿಕರು ಶ್ರಮಿಸಬೇಕು ಎಂದರು.

ಸಮ್ಮೇಳನವನ್ನ ಉದ್ಘಾಟಿಸಿ ಮಾತನಾಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಯಾದಗಿರಿಯ ಜಿಲ್ಲಾಧ್ಯಕ್ಷ ಶ್ರೀ ಸಿದ್ದಪ್ಪ ಹೊಟ್ಟಿಯವರು ಕಲ್ಯಾಣ ಕರ್ನಾಟಕದಲ್ಲಿ ಈ ರೀತಿಯ ಸಮ್ಮೇಳನಗಳು ನಿರಂತರವಾಗಿ ನಡೆಯಬೇಕು ಈ ಭಾಗದ ಪ್ರತಿಭೆಗಳಿಗೆ ಹೆಚ್ಚಿನ ಅವಕಾಶಗಳು ಸಿಗಬೇಕು ಕನ್ನಡ ಸಾಹಿತ್ಯ ಪರಿಷತ್ತಿಗೆ ಕಳೆದ ಮೂರು ವರ್ಷಗಳಿಂದಲೂ ಸಕ್ರಿಯವಾಗಿದೆ ಹೈದರಾಬಾದ್ ಕರ್ನಾಟಕ ನಾಗರೀಕರ ವೇದಿಕೆಯ ಈ ಕಾರ್ಯ ಅಭಿನಂದನೀಯ ಎಂದರು.

ರಾಜ್ಯ ಮಟ್ಟದ ಅಮೋಘವರ್ಷ ನೃಪತುಂಗ ಪ್ರಶಸ್ತಿಯನ್ನು ಯಾದಗಿರಿಯ ಮಾಧ್ಯಮದ ಪ್ರತಿಭಾವಂತ ವಿಸ್ತಾರ ನ್ಯೂಸ್ ಚಾನೆಲ್ ನ ಜಿಲ್ಲಾ ವರದಿಗಾರ ನಾಗಪ್ಪ ಮಾಲಿಪಾಟೀಲ್ ಹಾಗೂ ಇತರ ರಂಗ ಕರ್ಮಿಗಳಿಗೆ ರಾಜ್ಯಮಟ್ಟದ ಅಮೋಘವರ್ಷವರ್ದುರ್ಗ ಪ್ರಶಸ್ತಿಯನ್ನು ಪ್ರಧಾನ ಮಾಡಿ ಮಾತನಾಡುತ್ತಾ ಕಲ್ಯಾಣ ಕರ್ನಾಟಕದ ಕಾವ್ಯ ಪ್ರಪಂಚಕ್ಕೆ ವಿಶಿಷ್ಟವಾದ ಹೆಸರಿದೆ ನೃಪತುಂಗನ ಪ್ರಭಾವ ಈ ಭಾಗದ ಕವಿಗಳ ಮತ್ತು ಸಾಹಿತ್ಯದ ಮೇಲಿದೆ ನೃಪತುಂಗನ ನಾಡಿನಲ್ಲಿ ನಿರಂತರವಾಗಿ ಸಾಹಿತ್ಯ ಸೇವೆಗಳು ನಡೆಯುತ್ತಿವೆ ಕನ್ನಡದ ತೇರನ್ನ ಹೆಗಲಿಗೆ ಹಗಲುಗೊಟ್ಟು ಸಾಹಿತಿ ಮಿತ್ರರು ನಡೆಯುತ್ತಿದ್ದಾರೆ ಇದು ಕನ್ನಡ ಭಾಷೆಗೆ ಒಳ್ಳೆಯ ಪೂರಕ ಬೆಳವಣಿಗೆ ಎಂದರು.

ಹೈದರಾಬಾದ್ ಕರ್ನಾಟಕ ನಾಗರಿಕದ ವೇದಿಕೆಯು ಮ್ಮಿಕೊಂಡ ಕಲ್ಯಾಣ ಕರ್ನಾಟಕ ಸಾಂಸ್ಕೃತಿಕ ಸಂಭ್ರಮದ ಎರಡನೇ ಸಮ್ಮೇಳನದ ಸ್ವರೂಪ ಹಾಗೂ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ಇದ್ದು ನಿರಂತರವಾಗಿ ಈ ಸಂಸ್ಥೆ ಈ ರೀತಿಯ ಕಾರ್ಯಕ್ರಮಗಳನ್ನ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ನಡೆಸಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಈ ಸಂಸ್ಥೆಗೆ ಪ್ರೋತ್ಸಾಹಿಸಲಿ ಎಂಬ ಆಶಯವನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಯಾದಗಿರಿಯ ನಾಟ್ಯ ಭಾರತಿ ನೃತ್ಯ ಶಾಲೆಯ ತಂಡದಿಂದ ಸಮೂಹ ಭರತನಾಟ್ಯ ಕಲಬುರ್ಗಿಯ ಸಂಕಲ್ಪ ಮಾಲಿ ಪಾಟೀಲ್ ತಂಡದಿಂದ ಸಮೂಹ ನೃತ್ಯ. ವಿದ್ಯಾ ಮಂಗಳೂರು ಕೊಪ್ಪಳ ತ0ಡದಿಂದ ನೃತ್ಯ ರೂಪಕ. ಸುಶೀಲಾ ಎಂಎಸ್ ಬೆಂಗಳೂರು ತಂಡದಿಂದ ಸಮೂಹನೃತ್ಯ. ಗುರುರಾಜ್ ಶಾಸ್ತಿ ರಾಯಚೂರು ತಂಡದಿಂದ ಭರತನಾಟ್ಯ ರೂಪಕ ಯಾದಗಿರಿಯ ಎಂ ಜೆ ಡ್ಯಾನ್ಸ್ ಗ್ರೂಪ್ ತಂಡದಿಂದ ಸಮೂಹ ನೃತ್ಯ ಹಾಗೂ ಇನ್ನಿತರ ಕಲಾತಂಡಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನವನ್ನು ನಡೆದು ನಡೆದಿದ್ದ ಜನಮನವನ್ನ ರಂಜಿಸಿದವು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಯಾದಗಿರಿ ಇಂದ ಸಾಂಸ್ಕೃತಿಕ ನೃತ್ಯ ಕಲಾತಂಡಗಳನ್ನ ಕಲ್ಯಾಣ ಕರ್ನಾಟಕದ ಸಾಂಸ್ಕೃತಿಕ ಸಂಭ್ರಮದ 2ನೇ ಸಮ್ಮೇಳನದ ಕಾರ್ಯಕ್ರಮಕ್ಕೆ ಪ್ರಾಯೋಜನೆಯನ್ನು ಮಾಡಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಮಹೇಶ್ ಬಾಬು ಸುರ್ವೆ ವಹಿಸಿ ಪ್ರಸ್ತಾವಿಕವಾಗಿ ಮಾತನಾಡಿ ಅತಿಥಿಗಳನ್ನು ಸ್ವಾಗತಿಸಿದರು.

ಕಾರ್ಯಕ್ರಮದ ನಿರೂಪಣೆಯನ್ನು ಪಾಂಡವಪುರ ಮಂಜನಾಥ್ ನೆರವೇರಿಸಿದರು. ವೇದಿಕೆಯಲ್ಲಿ ಕೊಪ್ಪಳದ ರಥ ಶಿಲ್ಪಿ ಯಲ್ಲಪ್ಪ ಬಡಿಗೇರ್. ಮೇಘನಾಥ್ ಬೆಳ್ಳಿ ಚಿತ್ರಕಲಾವಿದರು ಶ್ರೀಮತಿ ನಿರೂಪ ಪಾಟೀಲ್. ಸಾಹಿತಿಗಳು ರಂಗಕರ್ಮಿಗಳಾದ ಶಂಕರ್ ಗುಗುರಿ. ಚನ್ನಬಸಪ್ಪ ಮಾಲಿ ಪಾಟೀಲ್. ರುದ್ರಗೌಡ ಹಂಗ್ಗನಹಳ್ಳಿ. ಸೋಮಶೇಖರ್ ನೀಲಿ ಮಲ್ಲೇಶ್ ಕೋನಾಳ ಸೇರಿದಂತೆ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಾಂಸ್ಕೃತಿಕ ಕಾರ್ಯದರ್ಶಿ ಸಂಜೀವ ಕುಮಾರ್ ನಿರಂಜನ್ ಸ್ವಾಮಿ ವಂದಿಸಿದರು.

# ನಗರಸಭೆ ಅಭಿವೃದ್ಧಿಗೆ ವಿವಿಧ ಕರಗಳನ್ನು ಪಾವತಿಸಿ




ರಬಕವಿ-ಬನಹಟ್ಟಿ: ರಬಕವಿ ಬನಹಟ್ಟಿ ನಗರಸಭೆಯ ವ್ಯಾಪ್ತಿಯಲ್ಲಿ ಬರುವ ಆಸ್ತಿ ಮಾಲೀಕರು ತಮ್ಮ ಆಸ್ತಿಗಳ ಕರ, ನೀರಿನ ಕರ, ಉದ್ದಿಮೆ ಪರವಾನಿಗೆ ಶುಲ್ಕ , ಜಾಹೀರಾತು ಕರ, ಮಳಿಗೆ ಬಾಡಿಗೆಗಳನ್ನು ಆದಷ್ಟು ಬೇಗನೆ ನಗರಸಭೆಗೆ ಪಾವತಿಸಿ ನಗರಗಳ ಅಭಿವೃದ್ಧಿಗಾಗಿ ಸಹಕರಿಸಬೇಕು ಎಂದು ರಬಕವಿ-ಬನಹಟ್ಟಿ ನಗರಸಭೆಯ ಪೌರಾಯುಕ್ತ ಜಗದೀಶ ಈಟಿ ತಿಳಿಸಿದರು.

ಮಂಗಳವಾರ ರಬಕವಿ ಬನಹಟ್ಟಿ ನಗರಸಭೆಯ ವ್ಯಾಪ್ತಿಯ ವಿವಿಧ ಬಡಾವಣೆಗಳಿಗೆ ತೆರಳಿ ಜನರಿಗೆ ತಿಳುವಳಿಕೆ ಹೇಳಿ ಪತ್ರಿಕೆಯ ಜೊತೆಗೆ ಅವರು ಮಾತನಾಡಿದರು.

ಕರ ವಸೂಲಾತಿ ಅಭಿಯಾನವನ್ನು ಡಿಸೆಂಬರ್ ಒಂದರಿಂದ ರಿಂದ ಮೂವತ್ತೊಂದರವರೆಗೆ ಹಮ್ಮಿಕೊಳ್ಳಲಾಗಿದೆ. ನಗರಸಭೆಯ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಬ್ಬರೂ ಕರಗಳನ್ನು ಆದಷ್ಟು ಬೇಗನೆ ಪಾವತಿಸಬೇಕು. ಕರಗಳ ವಸೂಲಾತಿಯಲ್ಲಿ ನೂರಕ್ಕೆ ನೂರರಷ್ಟು ವಸೂಲಾತಿ ಮಾಡಬೇಕಾಗಿದೆ. ಸಂಪೂರ್ಣವಾಗಿ ಕರವನ್ನು ವಸೂಲಿ ಮಾಡದೇ ಇದ್ದರೆ ಮುಂದಿನ ದಿನಗಳಲ್ಲಿ ನಗರಸಭೆಗೆ ಯಾವುದೇ ಅನುದಾನಗಳು ಬಿಡುಗಡೆಯಾಗುವುದಿಲ್ಲ.

ಸಾರ್ವಜನಿಕರು ಮುಂದಿನ ದಿನಗಳಲ್ಲಿ ಕರವನ್ನು ತುಂಬದೆ ಇದ್ದರೆ, ಅವರ ಮನೆಯ ಮುಂದೆ ಹಲಗೆ ಬಾರಿಸಿ ಕರವನ್ನು ವಸೂಲು ಮಾಡಲಾಗುವುದು. ಮಾನಹಾನಿ, ಮುಜುಗರಕ್ಕೆ ಹಾಗೂ ಇತರೆ ರೀತಿಯ ಯಾವುದೆ ಹಾನಿ ಮತ್ತು ನಷ್ಟಕ್ಕೆ ನಗರಸಭೆ ಜವಾಬ್ದಾರಿಯಾಗುವುದಿಲ್ಲ ಎಂದು ಪೌರಾಯುಕ್ತ ಜಗದೀಶ ಈಟಿ ತಿಳಿಸಿದರು.

ಸುರೇಶ ಬಾಗೇವಾಡಿ, ವಸಂತ ಪವಾರ, ಮುತ್ತಪ್ಪ ಚೌಡಕಿ, ಬಸವರಾಜ ಮಠದ, ಶಂಕರ ಮಾಂಗ, ಭೀಮು ಬಾಡಗಿ, ಎಂ. ಬಿ. ಮೊಕಾಶಿ, ಬಿ. ಎಸ್. ಹೊಸೂರ ಸೇರಿದಂತೆ ನಗರಸಭೆಯ ಅಧಿಕಾರಿಗಳು ಉಪಸ್ಥಿತರಿದ್ದರು.



**ಸಹಸ್ರ ದೀಪೋತ್ಸವ :** ಹಾರೂಗೇರಿ : ಸಮೀಪದ ಪರಮಾನಂದವಾಡಿ ಗ್ರಾಮದ ಶ್ರೀ ಗುರುದೇವ ಬ್ರಹ್ಮಾನಂದ ಆಶ್ರಮದಲ್ಲಿ ಡಿಸೆಂಬರ್ 12 ರಂದು ಕಾರ್ತಿಕೋತ್ಸವದ ನಿಮಿತ್ಯ ಸಹಸ್ರ ದೀಪೋತ್ಸವ ಕಾರ್ಯಕ್ರಮ ನೆರವೇರಿತು. ಕಾರ್ಯಕ್ರಮವು ಆಶ್ರಮದ ಪೀಠಾಧಿಪತಿಗಳಾದ ಡಾ. ಅಭಿನವ ಬ್ರಹ್ಮಾನಂದ ಮಹಾಸ್ವಾಮಿಗಳವರ ಸಾನಿಧ್ಯದಲ್ಲಿ ಹಾಗೂ ಕಾಡಾಪೂರದ ನಾಗಲಿಂಗ ಸ್ವಾಮಿಗಳ ನೇತೃತ್ವದಲ್ಲಿ ಗ್ರಾಮದ ಹಿರಿಯರ ಸಮ್ಮುಖದಲ್ಲಿ ನೆರವೇರಿತು.

# ಮಾನವ ಹಕ್ಕುಗಳು ಗೌರವಿಸುವುದು ಎಲ್ಲರ ಕರ್ತವ್ಯ: ಸಂಜಯ ಗುದಗುಡಿ




ಧಾರವಾಡ : ಜಗತ್ತಿನಲ್ಲಿರುವ ಪ್ರತಿಯೊಬ್ಬ ಮನುಷ್ಯನಿಗೂ ಆತ್ಮಗೌರವ, ಸ್ವಾಭಿಮಾನ, ಸ್ವಾತಂತ್ರ್ಯ ಹಾಗೂ ನೆಮ್ಮದಿಯಿಂದ ಬದುಕುವ ಹಕ್ಕಿದೆ. ವೈಯುಕ್ತಿಕ ಹಕ್ಕಿನ ಪ್ರತಿಪಾದನೆಯ ಜತೆಜತೆಯಲ್ಲಿ ಇತರರ ಹಕ್ಕನ್ನು ಗೌರವಿಸುವುದು ಕೂಡ ಅಷ್ಟೇ ಮುಖ್ಯವಾಗಿದೆ ಎಂದು ಶ್ರೀ. ಸಂಜಯ್ ಪಿ. ಗುದಗುಡಿ. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ, ನಗರದ ಅಂಜುಮನ್ ಕಾಲೇಜ್ ಪದವಿ ಮಹಾವಿದ್ಯಾಲಯದಲ್ಲಿ ಮಾನವ ಹಕ್ಕುಗಳ ದಿನಚಾರಣೆ ಅಂಗವಾಗಿ ಹಮ್ಮಿಕೊಂಡ್ಡಿದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಯಾವುದೇ ವರ್ಗ, ಲಿಂಗ, ಮತ, ಧರ್ಮ, ಶ್ರೀಮಂತ, ಬಡವ ಎನ್ನುವ ಭೇದಭಾವ ಇಲ್ಲದೇ ಭೂಮಿಯ ಮೇಲಿನ ಎಲ್ಲ ಮಾನವರು ಸಮಾನರು ಮತ್ತು ಎಲ್ಲರಿಗೂ ಮೂಲಭೂತ ಹಕ್ಕುಗಳಿವೆ ಎಂಬುದನ್ನು ಸಾರಿ ಹೇಳುವುದೇ ವಿಶ್ವ ಮಾನವ ಹಕ್ಕುಗಳ ದಿನಾ ಚರಣೆಯ ಪ್ರಮುಖ ಉದ್ದೇಶ ಎಂದರು. ಅಂಜುಮನೆ ಇಸ್ಲಾಂ ಸಂಥೆಯ ಅಧ್ಯಕ್ಷರು ಶ್ರಿ.ಇಕ್ಬಾಲ್ ಕೆ. ಜಮಾದಾರ ನಂತರ ನಾಡಿದ ಮಾನವ ಹಕ್ಕುಗಳ ದಿನದಂದು ಪ್ರತಿಯೊಬ್ಬ ವ್ಯಕ್ತಿಗೂ ಮಾನವ ಹಕ್ಕುಗಳ ಮೂಲಭೂತ ಪ್ರಾಮುಖ್ಯತೆಯನ್ನು ಪ್ರತಿಬಿಂಬಿಸೋಣ ಮತ್ತು ಎಲ್ಲರಿಗೂ ನ್ಯಾಯ, ಸಮಾನತೆ, ಶಾಂತಿ ಮತ್ತು ಸ್ವಾತಂತ್ರ್ಯವನ್ನು ಅನುಸರಿಸಲು ಅವಕಾಶವನ್ನು ಕಲ್ಪಿಸುವ ಪಣ ತೊಡೋಣ ಎಂದರು.

ಡಾ.ಎನ್.ಎಮ್.ಮಕಾನದಾರ ನಾಗರಿಕ ಸಮಾಜದ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವುದು ಮತ್ತು ಜನರಲ್ಲಿ ಮಾನವ ಹಕ್ಕುಗಳ ಬಗೆಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರತೀ ವರ್ಷ ಡಿ.10ರಂದು ವಿಶ್ವ ಮಾನವ ಹಕ್ಕುಗಳ ದಿನವನ್ನು ಆಚರಿಸಲಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ರಾಜ್ಯಶಾಸ್ತ್ರ ವಿಭಾಗದ ಪ್ರೊ. ನಾಗರಾಜ್ ಕನಕಣಿ ನೋಡಲ್ ಅಧಿಕಾರಿ ಡಾ.ಎನ್.ವಿ. ಗುದಗನವರ್ ಪತ್ರಿಕೂದ್ಯಮದ ಮುಖ್ಯಸ್ಥ ಎಸ್ ಎಸ್ ಅದೋನಿ ಆಯ್.ಕ್ಯೂ.ಎ.ಸಿ ಡಾ.ಎನ್.ಬಿ ನಾಲತವಾಡ ಡಾ.ಎಫ್.ಎಚ್. ನದಾಫ ಡಾ ಎಸ್ ಕೆ ಜಾಧವ್ ಇತರ ವಿಭಾಗದ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ಸಮರ್ಪಣೆ, ಶಿಸ್ತು ಮತ್ತು ನಿರ್ಣಯವೇ ಯಶಸ್ಸಿನ ಕೀಲಿಕೈ: ಡಾ. ಸಂತೋಷ್ ಎನ್.ಬಿ.



ಬಾಗಲಕೋಟೆ : ಪ್ರತಿಯೊಬ್ಬರು ಸಮರ್ಪಣೆ ಶಿಸ್ತು ಮತ್ತು ನಿರ್ಣಯವನ್ನು ಸಮರ್ಪಕವಾಗಿ ಬಳಸಿದ್ದೆ ಆದರೆ ಯಶಸ್ಸು ಸಾಧ್ಯವಾಗುತ್ತದೆ ಎಂದು ಡಾ. ಸಂತೋಷ್ ಎಂ ಬೆಳವಾಡಿ ಹೇಳಿದರು.

ನಗರದ ಎಂ ಆರ್ ಎನ್ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನಲ್ಲಿ ನಡೆದ 2023 24 ನೇ ಸಾಲಿನ ಬಿಎಎಂಎಸ್ ವಿದ್ಯಾರ್ಥಿಗಳಿಗಾಗಿನ ಪರಿವರ್ತನಾ ಪಠ್ಯಕ್ರಮ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಭಾಗಿಯಾಗಿದ್ದ ಗದಗ ಕಾಲೇಜಿನ ಪ್ರಾಂಶುಪಾಲರಾದ ಡಾ. ಸಂತೋಷ್ ಎನ್ ಬೆಳವಾಡಿ ಮಾತನಾಡುತ್ತಾ ಬದುಕಿನಂತೆ ಆಯುರ್ವೇದದ ನೀವು ಸಹ ಸಮರ್ಪಣೆ, ಶಿಸ್ತು ಮತ್ತು ನಿರ್ಣಯವನ್ನು ಬಳಸಿಕೊಂಡಿದ್ದೆ ಆದರೆ ಯಶಸ್ಸು ಸುಗಮವಾಗುತ್ತದೆ ಎಂದರು.

ಇನ್ನೋರ್ವ ಮುಖ್ಯ ಭಾಷಣಕಾರರಾಗಿದ್ದ ವರೂರಿನ ಎಜಿಎಂ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಸೈಯದ್ ಇರ್ಫಾನ್ ಖಾದ್ರಿ ಅವರು ಬಿಎಎಂಎಸ್‌ನ ಮೂಲಭೂತ ಅಂಶಗಳನ್ನು ತಿಳಿಸಿಕೊಟ್ಟರು.

11 ದಿನಗಳ ಕಾಲ ನಡೆಯುವ ಈ ಕಾರ್ಯಕ್ರಮವನ್ನು ನಗರದ ಪ್ರಸಿದ್ಧ ವೈದ್ಯರಾದ ಡಾ. ಎಚ್ ಆರ್ ಕಟ್ಟಿ ಉದ್ಘಾಟಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಬೆಳಗಾವಿ ಜಿಲ್ಲೆಯ ಶಹಪುರದ ಶ್ರೀ ಬಿ ಎಂ ಕನಕವಾಡಿ ಆಯುರ್ವೇದಿಕ್ ಕಾಲೇಜಿನ ಡಾ. ಸುಹಾಸ್ ಶೆಟ್ಟಿ ಭಾಗವಹಿಸಿದ್ದರು.

ಈ ಕಾರ್ಯಕ್ರಮದಲ್ಲಿ ಕಾಲೇಜಿನ ಡೀನ್ ಆದ ಡಾ. ಶಿವಕುಮಾರ್ ಗಂಗಾಲ, ಪ್ರಾಂಶುಪಾಲರಾದ ಡಾ. ಪ್ರಲ್ಹಾದ ಗಂಗಾವತಿ, ಜೊತೆಗೆ ಕಾಲೇಜಿನ ಎಲ್ಲ ಪ್ರಾಧ್ಯಾಪಕ ವರ್ಗ ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗಿಯಾಗಿದ್ದರು.

# ಬಾಲ್ಯಾವಸ್ಥೆ ಹಾಗೂ ಕಿಶೋರಾವಸ್ಥೆ ಕಾರ್ಮಿಕ ನಿಷೇಧ ಅರಿವು ನೆರವು



ವಿಜಯಪುರ : ಕಾರ್ಮಿಕ ಇಲಾಖೆಯಿಂದ ಕಟ್ಟಡ ಕಾರ್ಮಿಕರಿಗೆ ದೊರೆಯುವ ಇ-ಶ್ರಮ ಕಾಡ್ರ್, ಪಿಎಂಎಸ್‌ವೈಎಂ ಕಾರ್ಡ್ ಸೇರಿದಂತೆ ವಿವಿಧ ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳುವಂತೆ ಕಾರ್ಮಿಕ ಇಲಾಖೆ ಅಧಿಕಾರಿ ಎಸ್.ಜಿ. ಖೈನೂರ ಅವರು ಕರೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯವಾದಿಗಳ ಸಂಘ, ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕಾರ್ಮಿಕ ಇಲಾಖೆ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಹಾಗೂ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ನಗರದ ಲೋಯೋಲ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡ ಬಾಲ್ಯಾವಸ್ಥೆ ಹಾಗೂ ಕಿಶೋರಾವಸ್ಥೆ ಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕುರಿತು ಅರಿವು-ನೆರವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

18 ವರ್ಷದೊಳಗಿನ ಮಕ್ಕಳು ಯಾವುದೇ ಉದ್ದಿಮೆ ಸಂಸ್ಥೆಗಳಲ್ಲಿ ಕಂಡು ಬಂದಲ್ಲಿ ಇಲಾಖೆಯ ಗಮನಕ್ಕೆ ತರುವ ಮೂಲಕ ಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆಗೆ ಕೈ ಜೋಡಿಸಬೇಕು ಎಂದು ಅವರು ಹೇಳಿದರು. ಪ್ರಾಸ್ತಾವಿಕವಾಗಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘದ ನಿರ್ದೇಶಕಿ ಕುಮಾರಿ ನೀಲಮ್ಮಾ ಖೇಡಗಿ ಅವರು ಮಾತನಾಡಿ, ಜಿಲ್ಲಾ ಹಾಗೂ ತಾಲೂಕಾ ಮಟ್ಟದಲ್ಲಿ 11 ಇಲಾಖೆಯ ಅಧಿಕಾರಿಗಳ ತನಿಖಾ ತಂಡದಿಂದ ಪ್ರತಿ ತಿಂಗಳು ಅನಿರೀಕ್ಷಿತ ದಾಳಿ ಮಾಡಿ ಮಕ್ಕಳನ್ನು ರಕ್ಷಿಸಿ, ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿಗೆ ದಾಖಲಿಸಲಾಗುತ್ತಿದೆ ಎಂದು ಅವರು ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ಯಾನಲ್ ಅಡ್ವೋಕೇಟ್ ಬಾಬು ಅವತಾಡೆ ಬಾಲಕಾರ್ಮಿಕ ಕಾಯ್ದೆ 1986 ಹಾಗೂ ತಿದ್ದುಪಡಿ ಕಾಯ್ದೆ 2016ರ ಕುರಿತು ಸವಿವರವಾಗಿ ಮಾತನಾಡಿದರು.ಲೋಯೋಲ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಫಾದರ ಸಂತೊಷ ಫರ್ನಾಂಡೀಸ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಮಿಕ ನಿರೀಕ್ಷಕಿ ಜಗದೇವಿ ಸಜ್ಜನ, ದೈಹಿಕ ಪರಿವೀಕ್ಷಕ ಎಸ್.ಜೆ.ಬಿರಾದಾರ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಡಿಇಓ ಅನಿಲ ರಾಠೋಡ ಸೇರಿದಂತೆ ಶಾಲೆಯ ಮಕ್ಕಳು ಉಪಸ್ಥಿತರಿದ್ದರು.

# ರಾಜ್ಯಕ್ಕೆ 1714.086 ಲಕ್ಷ ರೂ.ಗಳ ಅನುದಾನ: ಕಡಾಡಿ

ಮೂಡಲಗಿ : ರಾಷ್ಟ್ರೀಯ ಆಯುಷ್ ಮಿಷನ್ ಕೇಂದ್ರ ಪ್ರಾಯೋಜಿತ ಯೋಜನೆಯಡಿಯಲ್ಲಿ, 2014-15ರಲ್ಲಿ ರೂ.78.32 ಕೋಟಿಗಳ ಅನುದಾನ ಮೀಸಲಿಡಲಾಗಿತ್ತು, ಇದನ್ನು 2022-23ರಲ್ಲಿ ರೂ.800.00 ಕೋಟಿಗೆ ಹೆಚ್ಚಿಸಲಾಗಿದೆ ಹಾಗೂ 2022-23ರ ಅವಧಿಯಲ್ಲಿ ಕರ್ನಾಟಕ ರಾಜ್ಯಕ್ಕೆ 1714.086 ಲಕ್ಷ ರೂ.ಗಳ ಅನುದಾನ ನೀಡಲಾಗಿದೆ ಎಂದು ಕೇಂದ್ರ ಆಯುಷ್ ಇಲಾಖೆ ಸಚಿವ ಸರ್ಬಾನಂದ ಸೋನೋವಾಲ್ ಅವರು ಲಿಖಿತ ಉತ್ತರದಲ್ಲಿ ಮಾಹಿತಿ ನೀಡಿದ್ದಾರೆಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಹೇಳಿದರು.

ನವದೆಹಲಿಯಲ್ಲಿ ನಡೆಯುತ್ತಿರುವ ರಾಜ್ಯಸಭೆಯ ಚಳಿಗಾಲ ಅಧಿವೇಶನದಲ್ಲಿ ರಾಷ್ಟ್ರೀಯ ಆಯುಷ್ ಮಿಷನ್ ಯೋಜನೆಯ ಅನುಷ್ಠಾನ ಹಾಗೂ ಆಯುಷ್ ಕಾಲೇಜುಗಳ ಹೆಚ್ಚಳ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು ದೇಶದಲ್ಲಿ 2013-14 ರಲ್ಲಿ 312 ಆಯುಷ್ ಕಾಲೇಜುಗಳು ಇದ್ದವು. ಪ್ರಸ್ತುತ 2023-24 ರಲ್ಲಿ 615 ಆಯುಷ್ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಕಳೆದ 10 ವರ್ಷಗಳಲ್ಲಿ 303 ಆಯುಷ್ ಕಾಲೇಜುಗಳನ್ನು ಪ್ರಾರಂಭಿಸಲಾಗಿದೆ. ಇವುಗಳಲ್ಲಿ 541 ಆಯುರ್ವೇದ ಕಾಲೇಜ, 17 ಸಿದ್ಧ ಕಾಲೇಜ 57 ಯುನಾನಿ ಕಾಲೇಜುಗಳ ಕಾರ್ಯನಿರ್ವಹಿಸುತ್ತಿವೆ ಎಂದರು.

ಆಯುಷ್ ವ್ಯವಸ್ಥೆಗಳ ಒಟ್ಟಾರೆ ಅಭಿವೃದ್ಧಿ ಮತ್ತು ಉತ್ತೇಜನಕ್ಕಾಗಿ ರಾಜ್ಯ ವಾರ್ಷಿಕ ಕ್ರಿಯಾ ಯೋಜನೆಗಳಲ್ಲಿ ಸ್ವೀಕರಿಸಿದ ಪ್ರಸ್ತಾವನೆಗಳ ಪ್ರಕಾರ ಅವರಿಗೆ ಹಣಕಾಸಿನ ನೆರವು ನೀಡುವ ಮೂಲಕ ದೇಶಾದ್ಯಂತ ರಾಷ್ಟ್ರೀಯ ಆಯುಷ್ ಮಿಷನ್ ಯೋಜನೆಯನ್ನು ಅನುಷ್ಠಾನಗೋಳಿಸುತ್ತಿದೆ. ಅಸ್ತಿತ್ವದಲ್ಲಿರುವ ಆಯುಷ್ ಔಷಧಾಲಯಗಳು ಮತ್ತು ಆರೋಗ್ಯ ಉಪ ಕೇಂದ್ರಗಳನ್ನು ನವೀಕರಿಸುವ ಮೂಲಕ ಆಯುಷ್ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳ ಕಾರ್ಯಾಚರಣೆಯಲ್ಲಿರುತ್ತವೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಜಿಲ್ಲಾ ಆಸ್ಪತ್ರೆಯಲ್ಲಿ ಹೋಮಿಯೋಪತಿ ಸೇರಿದಂತೆ ಆಯುಷ್ ಸೌಲಭ್ಯಗಳನ್ನು ನೀಡಲಾಗಿದೆ. 10/30/50 ಹಾಸಿಗೆಗಳ ಸಮಗ್ರ ಆಯುಷ್ ಆಸ್ಪತ್ರೆಗಳನ್ನು ಸ್ಥಾಪಿಸುವುದು.

ಆಯುಷ್ ಆಸ್ಪತ್ರೆಗಳಿಗೆ ಅಗತ್ಯ ಔಷಧಗಳ ಪೂರೈಕೆ. ಸರ್ಕಾರಿ ವಲಯದಲ್ಲಿ ಆಯುಷ್ ಬೋಧನಾ ಸಂಸ್ಥೆಗಳ ಲಭ್ಯತೆ ಅಸಮರ್ಪಕವಾಗಿರುವ ರಾಜ್ಯಗಳಲ್ಲಿ ಹೊಸ ಆಯುಷ್ ಕಾಲೇಜುಗಳ ಸ್ಥಾಪನೆ, ಆಯುಷ್ ಪದವಿಪೂರ್ವ ಸಂಸ್ಥೆಗಳ ಮೂಲಸೌಕರ್ಯ ಅಭಿವೃದ್ಧಿ.

ಆಯುಷ್ ಸ್ನಾತಕೋತ್ತರ ಸಂಸ್ಥೆಗಳ ಮೂಲಸೌಕರ್ಯ ಅಭಿವೃದ್ಧಿ/ಪಿಜಿ/ಫಾರ್ಮಸಿ/ಪ್ಯಾರಾ-ಮೆಡಿಕಲ್ ಕೋರ್ಸ್‌ಗಳಲ್ಲಿ ಸೇರಿಸಲಾಗಿದೆ ಎಂದು ಸಚಿವರು ಉತ್ತರಿಸಿದ್ದಾರೆಂದು ಸಂಸದ ಈರಣ್ಣ ಕಡಾಡಿ ಮಾಹಿತಿ ನೀಡಿದರು.

# ಸರಕಾರದ ಪ್ರಧಾನ ಕಾರ್ಯದರ್ಶಿ ರಿತೇಶಕುಮಾರ ಸಿಂಗ ಭೇಟಿ




ಮೂಡಲಗಿ : ಮಕ್ಕಳ ಕಲಿಕಾ ಪ್ರಗತಿ, ಶಾಲಾ ದಾಖಲಾತಿ, ಬಿಸಿಯೂಟ, ಮೂಲಭೂತ ಸೌಲಭ್ಯಗಳು, ಶಾಲಾ ಸಮಗ್ರ ಪರಿಸರ ಹಾಗೂ ಸಿಬ್ಬಂದಿಗಳ ಪಾಲ್ಗೊಳ್ಳುವಿಕೆ ಪ್ರಶಂಸಾರ್ಹವಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಸರಕಾರದ ಪ್ರಧಾನ ಕಾರ್ಯದರ್ಶಿ ರಿತೇಶಕುಮಾರ ಸಿಂಗ ಹರ್ಷವ್ಯಕ್ತಪಡಿಸಿದರು.

ಅವರು ಬುಧವಾರದಂದು ಮೂಡಲಗಿ ಶೈಕ್ಷಣಿಕ ವಲಯದ ಮೆಳವಂಕಿಯ ಸಿದ್ಧಾರೋಡ ಮಠ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ವಡೇರಟ್ಟಿಯ ಸಮೂಹ ಸಂಪನ್ಮೂಲ ಕೇಂದ್ರ, ಕಸ್ತೂರಿ ಬಾ ಗಾಂಧೀ ಬಾಲಿಕೆಯರ ವಸತಿ ನಿಲಯ, ಸರಕಾರಿ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಾಲೆಗಳಿಗೆ ಆಕಸ್ಮಿಕ ಭೇಟಿ ನೀಡಿದರು. ಸರಕಾರಿ ಶಾಲೆಗಳಲ್ಲಿ ದಾಖಲಾತಿಯ ಕೊರತೆ ಎದ್ದು ಕಾಣುವ ಸಂದರ್ಭದಲ್ಲಿ ಅತೀ ಹೆಚ್ಚು ದಾಖಲಾತಿ ಹೊಂದುವುದು ಅತ್ಯವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಮೆಳವಂಕಿಯ ಸಿದ್ಧಾರೋಡ ಮಠ ಶಾಲೆಯು 728 ಮಕ್ಕಳನ್ನು ಹಾಗೂ 10 ಜನ ಶಿಕ್ಷಕರನ್ನು ಹೊಂದುವದರ ಮೂಲಕ ಮಾದರಿ ಶಾಲೆಯಾಗಿದೆ. ಕಲಿಕೆ ಫಲಪ್ರದವಾಗುವ ನಿಟ್ಟಿನಲ್ಲಿ ಶಿಕ್ಷಕ ಸಮೂಹದ ಪಾತ್ರ ಮೆಚ್ಚುವಂತಾಗಿದೆಂದರು.

ಸರಕಾರಿ ಶಾಲೆಗಳಲ್ಲಿ ಅನೇಕ ಕಲಿಕಾ ಕಾರ್ಯಚಟುವಟಿಕೆಗಳು, ಪಠ್ಯದ ಜೊತೆಗೆ ಸಹ ಪಠ್ಯ ಚಟುವಟಿಕೆಗಳು ಹಾಗೂ ಪೌಷ್ಠಿಕಾಂಶಯುಕ್ತ ಉಪಹಾರದ ವ್ಯವಸ್ಥೆ ಉತ್ತಮ ರೀತಿಯದಾಗಿದೆ. ಉತ್ತಮ ರೀತಿಯಾದ ಕಲಿಕಾ ಪರಿಸರ ಸೃಷ್ಠಿಸಿದರೆ ಮಕ್ಕಳ ನಲವಿನ ಕಲಿಕೆಗೆ ಸಹಾಯಕವಾಗುವದು. ಮಕ್ಕಳ ಕಲಿಕೆಗೆ ಪೂರಕ ಚಟುವಟಿಕೆಗಳನ್ನು ಒದಗಿಸುವುದು ಅತ್ಯಾವಶ್ಯಕವಾಗಿದೆ ಎಂದರು.

ಈ ಸಂದರ್ಭದಲ್ಲಿ ಅತೀ ಹೆಚ್ಚು ದಾಖಲಾತಿ ಹೊಂದಿರುವ ಮೆಳವಂಕಿಯ ಸಿದ್ಧಾರೋಡ ಮಠ ಶಾಲೆಯ ಪ್ರಭಾರಿ ಮುಖ್ಯೋಪಾಧ್ಯಾಯ ಈರಣ್ಣ ಕಡಕೋಳ ಹಾಗೂ ಶಾಲಾ ಸಿಬ್ಬಂದಿಯವರನ್ನು ಪ್ರಶಂಸಿಸಿ 'ಅಭಿನಂದನಾ ಪತ್ರ' ನೀಡಿದರು.

ಈ ಸಂದರ್ಭದಲ್ಲಿ ಧಾರವಾಡ ಅಪರ ಆಯುಕ್ತ ಜಯಶ್ರೀ ಶಿಂತ್ರಿ, ಅಪರ ಆಯುಕ್ತ ಆಕಾಶ, ಚಿಕ್ಕೋಡಿಯ ಡಿಡಿಪಿಯು ಪಾಂಡುರಂಗ ಭಂಡಾರೆ, ದಾರವಾಡದ ಡಿಡಿಪಿಐ ಸಂಜೀವ ಬೆಂಗೇರಿ, ಮೂಡಲಗಿ ಬಿಇಓ ಅಜೀತ ಮನ್ನಿಕೇರಿ ಗೋಕಾಕ ಬಿಇಓ ಜಿ.ಬಿ ಬಳಗಾರ, ಮದ್ಯಾಹ್ನ ಉಪಹಾರ ಯೋಜನೆಯ ಸಹಾಯಕ ನಿರ್ದೇಶಕ ಎ.ಬಿ ಮಲಬನ್ನವರ, ಸಿ.ಆರ್.ಪಿ ಎಮ್.ಎಲ್ ಅಮಣಿ ಹಾಜರಿದ್ದರು.

# ಜೀವನಶೈಲಿ ಔಷಧಿ ಎಂಬ ಹೊಸ ವಿಜ್ಞಾನ




ವಿಜಯಪುರ : ಜೀವನಶೈಲಿ ಔಷಧಿ ಪದ್ಧತಿ ಎಂಬುದು, ವೈದ್ಯ ವಿಜ್ಞಾನದ ಒಂದು ಹೊಸ ಅಧ್ಯಾಯ. ಸ್ವಸ್ಥ ಜೀವನಕ್ಕೆ ಔಷಧಿಗಳೊಂದಿಗೆ, ಆರೋಗ್ಯಕರ ಜೀವನ ಕ್ರಮವನ್ನೂ ರೂಢಿಸಿಕೊಳ್ಳಬೇಕು. ಆಹಾರ-ವಿಹಾರ, ಗಾಢವಾದ ನಿದ್ರೆ, ಯೋಗ ಹಾಗೂ ಧ್ಯಾನಗಳು ಅತ್ಯವಶ್ಯಕ. ಇವೂ ಆರೋಗ್ಯಕರ ಜೀವನಕ್ಕೆ ಬೇಕಾದ ಔಷಧಿಗಳು ಎಂದು ಡಾ. ಅನಿತಾ ತೇಲಿ ಹೇಳಿದರು.

ಜೀವನಶೈಲಿ ಔಷಧಿಗಳ ಕುರಿತಾಗಿಯೇ ವಿಶೇಷ ಅಧ್ಯಯನ ಮಾಡಿದ ಅವರು, ನಮ್ಮ ಆಹಾರದಲ್ಲಿ ಶೇ. 60ರಷ್ಟು ಕಾರ್ಬೊಹೈಡ್ರೇಟ, 30ರಷ್ಟು ಕೊಬ್ಬು ಹಾಗು 10ರಷ್ಟು ಪ್ರೋಟೀನ ಅಂಶಗಳು ಇರಬೇಕು. ನಿತ್ಯ ಕನಿಷ್ಟ 2 ಲೀಟರ್ ನೀರನ್ನು ಕುಡಿಯಬೇಕು. ನಮ್ಮ ಕೌಟುಂಬಿಕ, ಸಾಮಾಜಿಕ ಸಂಬಂಧಗಳು ಉತ್ತಮವಾಗಿರಬೇಕು ಎಂದು ಉದಾಹರಣೆಗಳ ಸಮೇತ ವಿವರಿಸಿದರು.

ಹಿರಿಯ ನಾಗರಿಕರ ವೇದಿಕೆ, ಪ್ರೊಬಸ್ ಕ್ಲಬ್ ಉತ್ತರದ, ಮಾಸಿಕ ಸಭೆಯಲ್ಲಿ ಅವರು ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು.

ಪ್ರಾರಂಭದಲ್ಲಿ ಕ್ಲಬ್ಬಿನ ಉಪಾಧ್ಯಕ್ಷ ಸಾಹಿತಿ ಸುಭಾಸ ಯಾದವಾಡ ಅತಿಥಿಗಳನ್ನು ಪರಿಚಯಿಸಿ ಎಲ್ಲರನ್ನೂ ಸ್ವಾಗತಿಸಿದರು. ಅಧ್ಯಕ್ಷ ವಿಠಲ ತೇಲಿ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಕಾರ್ಯದರ್ಶಿ ಮಹಾದೇವ ಹಾಲಳ್ಳಿ ಕಾರ್ಯಕ್ರಮವನ್ನು ನಿರೂಪಿಸಿದರು. ಕೊನೆಯಲ್ಲಿ ಖಜಾಂಚಿ ಜಗದೀಶ ಮೋಟಗಿ ವಂದಿಸಿದರು.

ಕಾರ್ಯಕ್ರಮ ಕೊನೆಯಲ್ಲಿ ಡಾ. ಅನಿತಾ ತೇಲಿ, ಸಭಿಕರ ಪ್ರಶ್ನೆಗಳಿಗೆ ಸಮಾಧಾನಕರವಾದ ಉತ್ತರಗಳನ್ನು ನೀಡಿ, ಅವರ ಗೊಂದಲ-ಸಂಶಯಗಳನ್ನು ಪರಿಹರಿಸಿದರು.

# ಅಥಣಿಯಲ್ಲಿ ಪ್ರತಿಧ್ವನಿಸಿದ ಪ್ರತ್ಯೇಕ ಜಿಲ್ಲೆಯ ಕೂಗು, ಅಂಗಡಿ ಮುಗ್ಗಟ್ಟು ಬಂದ ಜಿಲ್ಲಾ ರಚನೆಗೆ ಅಥಣಿ ಯೋಗ್ಯ ಅಧಿವೇಶನದಲ್ಲಿ ಧ್ವನಿ ಎತ್ತುತ್ತೇನೆ : ಶಾಸಕ ಸವದಿ ಭರವಸೆ



ಅಥಣಿ : ಅಥಣಿ ನೂತನ ಜಿಲ್ಲೆಯಾಗಿ ರಾಜ್ಯದಲ್ಲಿ ಕಂಗೊಳಿಸಲಿ ಬೆಳಗಾವಿ ಎರಡನೇ ರಾಜಧಾನಿ ಎಂದು ಸರ್ಕಾರದ ಬಾವನೆ ಇರುವುದರಿಂದ ಎರಡನೇ ರಾಜಧಾನಿಗೆ ಕೊರತೆ ಆಗಬಾರದು ದೊಡ್ಡ ಜಿಲ್ಲೆಯಾಗಿ ಉಳಿಯಬೇಕು ಎಂದು ಸರ್ಕಾರ ಭಾವನೆ ಇರುವುದರಿಂದ ಅಥಣಿ ಕಾಗವಾಡ ರಾಯಬಾಗ್ ಕುಡಚಿ ಪಕ್ಕದ ಬಾಗಲಕೋಟೆ ಜಿಲ್ಲೆಯ ತೇರದಾಳ ಮತ್ತು ಜಮಖಂಡಿ ತಾಲೂಕಿನ ಕೆಲವು ಹಳ್ಳಿಗಳಿಗೆ ಅಥಣಿ ಮದ್ಯದಲ್ಲಿ ಇರುವುದರಿಂದ ಜಿಲ್ಲಾ ರಚನೆಗೆ ಅಥಣಿ ಯೋಗ್ಯವಾಗಿದೆ ಈ ನಿಟ್ಟಿನಲ್ಲಿ ಸರ್ಕಾರದ ಗಮನ ಸೆಳೆಯಲು ಬೆಳಗಾವಿ ಅಧಿವೇಶನದಲ್ಲಿ ನಾನು ಧ್ವನಿ ಎತ್ತುತ್ತೇನೆ ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು,

ಅವರು ಸೋಮವಾರ ಅಥಣಿ ಜಿಲ್ಲಾ ಹೋರಾಟ ಸಮಿತಿ ಹಮ್ಮಿಕೊಂಡಿದ್ದ ಅಥಣಿ ಬಂದ್ ಮತ್ತು ಪ್ರತಿಭಟನಾ ಮೆರವಣಿಗೆ ಸಂದರ್ಭದಲ್ಲಿ ಮನವಿ ಪತ್ರ ಸ್ವೀಕರಿಸಿ ಮಾತನಾಡಿದರು. ಬೆಳಗಾವಿ ದೊಡ್ಡ ಜಿಲ್ಲೆಯಾಗಿ, ರಾಜ್ಯದ ಎರಡನೆಯ ರಾಜಧಾನಿಯಾಗಿ ಮುಂದುವರೆಯಲಿ ಅಥಣಿಗೆ ಪಕ್ಕದ ಕ್ಷೇತ್ರಗಳಾದ ಕಾಗವಾಡ, ಕುಡಚಿ, ರಾಯಬಾಗ, ಹಾರೂಗೇರಿಗಳ ಜೊತೆಗೆ ಬಾಗಲಕೋಟ ಜಿಲ್ಲೆಯ ಕೇತ್ರಗಳಾದ ತೇರದಾಳ ಮತ್ತು ಜಮಖಂಡಿ, ರಬಕವಿ ಬನಹಟ್ಟಿ ಸೇರಿಸಿಕೊಂಡು ಅಥಣಿ ಪ್ರತ್ಯೇಕ ಜಿಲ್ಲೆಯಾಗಿ ಮಾಡಲು ರಾಜ್ಯ ಸರ್ಕಾರ ಮುಂದಾಗಬೇಕು ಎಂದು ಹೋರಾಟಗಾರರ ಪರವಾಗಿ ಶಾಸಕರು ಸರಕಾರವನ್ನು ಒತ್ತಾಯಿಸಿದರು.

ಅಥಣಿ ಪಟ್ಟಣ ಸೇರಿದಂತೆ ತಾಲೂಕಿನ ಕೊನೆಯ ಭಾಗದ ಹಳ್ಳಿಗಳ ಜನರು ತಮ್ಮ ಕೆಲಸ ಕಾರ್ಯಗಳಿಗೆ ಬೆಳಗಾವಿಗೆ ತಲುಪಬೇಕಾದಲ್ಲಿ ಸು. 200 ಕೀ.ಮಿ ದೂರ ಹೋಗಿ ಬರಬೇಕಾಗುತ್ತದೆ. ಸಮಯವು ವ್ಯರ್ಥವು ಆಗುವದನ್ನು ತಪ್ಪಿಸಿದಂತೆ ಆಗುವದರ ಜೊತೆಗೆ ಜನರಿಗೆ ಆಗುತ್ತಿರುವ ಬವಣೆ ನೀಗಿಸಿದಂತಾಗುತ್ಯದೆ. ಆಡಳಿತಾತ್ಮಕ ಹಾಗೂ ಅಭಿವೃದ್ಧಿ ದೃಷ್ಟಿಯಿಂದ ಜಿಲ್ಲಾ ಆಡಳಿತವನ್ನು ಜನರ ಸಮೀಪ ತರುವುದಕ್ಕೆ ಅಥಣಿ ಅನುಕೂಲರವಾಗಲಿದೆ. ಈ ಕುರಿತು ನಾನು ಬೆಳಗಾವಿ ಅಧಿವೇಶನದಲ್ಲಿ ಧ್ವನಿ ಎತ್ತುತ್ತೇನೆ. ಅಖಂಡ ಬೆಳಗಾವಿ ಜಿಲ್ಲೆಯಲ್ಲಿ ಕೊನೆಯ ತಾಲೂಕು ಅಥಣಿ ಇರುವದರಿಂದ ಸುಗಮ ಆಡಳಿತ್ಮಾಕ ದೃಷ್ಟಿಯಿಂದ ಜಿಲ್ಲೆಯನ್ನು ವಿಭಾಗಿಸುವುದು ಅನಿವಾರ್ಯವು ಸೂಕ್ತವುವಾಗಿದೆ, ಈ ಭಾಗದ ಸಮಾನ ಮನಸ್ಕರ ಶಾಸಕರ ಜೊತೆಗೆ ಸೇರಿ ಸದನದಲ್ಲಿ ಧ್ವನಿ ಎತ್ತಿ ರಾಜಕೀಯವಾಗಿಯೂ ಕಾವು ಪಡೆದುಕೊಳ್ಳುವಂತೆ ಮಾಡಲಾಗುವುದು ಎಂದರು. ಬೆಳಗಾವಿ ಅಧಿವೇಶನ ನಡೆಯತ್ತಿರುವದರಿಂದ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಭೇಟಿ ಮಾಡಿ ಪ್ರತ್ಯೇಕ ಜಿಲ್ಲೆಯ ಅಗತ್ಯತೆ ಕುರಿತು ಮನವರಿಕೆ ಮಾಡಕೊಡಲಾಗುವುದು ಎಂದು ಶಾಸಕ ಸವದಿ ಹೇಳಿದರು.

ಮೋಟಗಿಮಠದ ಪ್ರಭು ಚನ್ನಬಸವ ಸ್ವಾಮೀಜಿ ಮಾತನಾಡಿ ಗಡಿನಾಡು ಬೆಳಗಾವಿ ಜಿಲ್ಲೆ ಎಂದೆಂದಿಗೂ ಕನ್ನಡಿಗರ ಅಸ್ತಿಯಾಗಿದೆ. ಆದ್ದರಿಂದಲೇ ರಾಜ್ಯ ಸರ್ಕಾರ ಇಲ್ಲಿ ಸುವರ್ಣ ಸೌದ ನಿರ್ಮಿಸಿ ಅಧಿವೇಶನ ನಡೆಸುತ್ತಿದೆ. ಈ ಸಂದರ್ಭದಲ್ಲಿ ಈ ಭಾಗದ ಜನತೆಯ ಆಶೋತ್ತರಗಳಿಗೆ ರಾಜ್ಯ ಸರ್ಕಾರ ಸ್ಪಂದಿಸಬೇಕು. ರಾಜ್ಯದಲ್ಲಿ ಅತಿ ದೊಡ್ಡ ಜಿಲ್ಲೆಯಾಗಿರುವ ಬೆಳಗಾವಿ ಜಿಲ್ಲೆಯನ್ನ ವಿಂಗಡಿಸಬೇಕು ಎಂಬ ಹೋರಾಟ ಅನೇಕ ದಿನಗಳಿಂದ ನಡೆಯುತ್ತಿದೆ. ಜಿಲ್ಲೆಯ ಅನೇಕ ತಾಲೂಕಿನ ಜನರು ಪ್ರತ್ಯೇಕ ಜಿಲ್ಲೆಗಳಿಗಾಗಿ ಬೇಡಿಕೆ ಇಟ್ಟು ಹೋರಾಟ ನಡೆಸುತ್ತಿದ್ದಾರೆ. ಬೇರೆಯವರು ಕೇಳುವ ಜಿಲ್ಲೆಯ ಹಕ್ಕುಗಳ ನಮ್ಮದು ಯಾವುದೇ ಆಕ್ಷೇಪವಿಲ್ಲ. ಎಂದು ಹೇಳಿದರು.

ಹೋರಾಟದ ನೇತೃತ್ವ ವಹಿಸಿದ್ದ ಯುವ ಮುಖಂಡ ಶಿವಕುಮಾರ ಸವದಿ ಹಾಗೂ ಪ್ರಶಾಂತ ತೋಡ್ಕರ ಸೇರಿದಂತೆ ಅನೇಕ ಮಠಾಧೀಶರು ಮತ್ತು ಹೋರಾಟಗಾರರು ಈ ಬೃಹತ್ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಸಿದ್ದೇಶ್ವರ ದೇವಸ್ಥಾನದಿಂದ ಆರಂಭವಾಗಿ ಬಸಬೇಶ್ವರ ವೃತ್ತದಲ್ಲಿ ಸಮಾವೇಶಗೊಂಡು ಪ್ರತಿಭಟನೆ ನಡೆಸಲಾಯಿತು. ನಂತರ ತಹಸೀಲ್ದಾರ್ ವಾಣಿ ಯು ಅವರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಗಚ್ಚಿನ ಮಠದ ಶಿವಬಸವ ಸ್ವಾಮೀಜಿ, ಶೆಟ್ಟರ ಮಠದ ಮರುಳಸಿದ್ದ ಸ್ವಾಮೀಜಿ, ಕೌಲಗುಡ್ಡ ಅಮರೇಶ್ವರ ಮಹಾರಾಜರು, ಬಬಲಾದಿ ಮಠದ ಚಂದ್ರಯ್ಯ ಸ್ವಾಮೀಜಿ, ನದಿ ಇಂಗಳಗಾಂವ ಮಠದ ಸಿದ್ದಲಿಂಗ ಸ್ವಾಮೀಜಿ ಸೇರಿದಂತೆ ಮಾಜಿ ಶಾಸಕ ಶಹಜಾನ ಡೊಂಗರಗಾಂವ, ಮುಖಂಡರಾದ ಗಜಾನನ ಮಂಗಸೂಳಿ, ಸುನೀಲ ಸಂಕ, ಹಿರಿಯ ನ್ಯಾಯವಾದಿ ಕೆ ಎಲ್ ಕುಂದರಗಿ, ಎ ಎಂ ಖೋಬ್ರಿ, ದೇವೇಂದ್ರ ಬಿಸ್ವಾಗರ, ಶಿವಾನಂದ ದಿವಾನಮಳ, ಅರುಣ್ ಯಲಗುದ್ರಿ, ಸಿ ಎಸ್ ನೇಮಗೌಡ ಸೇರಿದಂತೆ ಇನ್ನಿತರ ಮುಖಂಡರು ಮತ್ತು ಹೋರಾಟಗಾರರು ಮಾತನಾಡಿ ಅಥಣಿ ಜಿಲ್ಲೆಯಾಗುವಂತೆ ಹಕ್ಕೊತ್ತಾಯ ಮಾಡಿದರು.

ಈ ವೇಳೆ ಅಥಣಿ ಜಿಲ್ಲಾ ಹೋರಾಟ ಸಮಿತಿ ಅದ್ಯಕ್ಷ ಪ್ರಶಾಂತ ತೋಡಕರ, ಗೌರವ ಅದ್ಯಕ್ಷ ಶಿವಕುಮಾರ ಸವದಿ, ರಾಮನಗೌಡ ಪಾಟೀಲ, ಸದಾಶಿವ ಬುಟಾಳಿ, ಶಿವರುದ್ರ ಘೋಳಪ್ಪನವರ, ರಾಜು ಅಳಬಾಳ, ಸತೀಶ ಪಾಟೀಲ್, ಅಣ್ಣಾಸಾಬ ತೆಲಸಂಗ ,ರವಿ ಬಡಕಂಬಿ, ರಾವಸಾಬ ಐಹೊಳೆ, ಮಹಾದೇವ ಮಡಿವಾಳ, ಸೇರಿದಂತೆ ವಿವಿಧ ಸಂಘಟನೆಯ ಪದಾಧಿಕಾರಿಗಳು ಮತ್ತು ಕನ್ನಡ ಪರ ಸಂಘಟನೆಗಳಪದಾಧಿಕಾರಿಗಳು ಹೋರಾಟದಲ್ಲಿ ಪಾಲ್ಗೊಂಡಿದ್ದರು,

ಅಥಣಿ ಡಿವೈಎಸ್ಪಿ ಶ್ರೀಪಾದ್ ಜಲ್ದೆ, ಸಿಪಿಐ ರವೀಂದ್ರ ನಾಯ್ಕೋಡಿ ಮಾರ್ಗದರ್ಶನದಲ್ಲಿ ಪಿಎಸ್ ಐ ಶಿವಾನಂದ ಕಾರಜೋಳ ಮತ್ತು ರಾಕೇಶ್ ಬಗಲಿ ಹಾಗೂ ಅವರ ಸಿಬ್ಬಂದಿ ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು.

ಭೌಗೋಳಿಕವಾಗಿ ವಿಸ್ತಾರ ಹೊಂದಿರುವ ಮತ್ತು ಜಿಲ್ಲೆಯ ಸ್ಥಾನಕ್ಕೆ ಎಲ್ಲ ಅರ್ಹತೆ ಹೊಂದಿರುವ ಮಹಾತಪಸ್ವಿ ಶಿವಯೋಗಿಗಳ ನಾಡು ಅಥಣಿ ಜಿಲ್ಲೆಯಾಗಬೇಕು. ಈ ನಿಟ್ಟಿನಲ್ಲಿ ಜನಪ್ರತಿನಿಧಿಗಳು ಇಚ್ಛಾಶಕ್ತಿಯನ್ನು ತೋರಬೇಕು. ಮಠಾಧೀಶರಾಗಿ ನಾವು ಕೂಡ ನಿಮ್ಮ ಹೋರಾಟಕ್ಕೆ ಬೆಂಬಲವಾಗಿ ನಿಲ್ಲುತ್ತೇವೆ. ಅಥಣಿ ಜಿಲ್ಲೆ ಬೇಡಿಕೆ ಅದು ನಮ್ಮ ಹಕ್ಕು. ಆ ಹಕ್ಕನ್ನು ಪಡೆದುಕೊಳ್ಳಲು ನಾವು ಯಾವುದೇ ಸತ್ಯಾಗ್ರಹಕ್ಕೂ ಸಿದ್ಧ.

**-ಪ್ರಭು ಚನ್ನಬಸವ ಸ್ವಾಮೀಜಿ, ಮೋಟಗಿ ಮಠ ಅಥಣಿ**

# ಮಹಿಳಾ ಸ್ವ-ಸಹಾಯ ಸಂಘಗಳಿಗೆ ಬ್ಯಾಂಕ್ ಸಾಲ ಮೇಳ



ಮುಧೋಳ : ಕೆನರಾ ಬ್ಯಾಂಕ ಹಾಗೂ ಸಂಜೀವಿನಿ – ಎನ್,ಆರ್,ಎಲ್,ಎಮ್ ಯೋಜನೆ ಆಶ್ರಯದಲ್ಲಿ ಮುಧೋಳ ತಾಲೂಕ ಪಂಚಾಯತ ಸಭಾ ಭವನದಲ್ಲಿ ಮಹಿಳಾ ಸ್ವ ಸಹಾಯ ಗುಂಪುಗಳಿಗೆ ಕೆನರಾ ಬ್ಯಾಂಕ ವತಿಯಿಂದ ಬ್ಯಾಂಕ ಸಾಲ ಮೇಳ ಏರ್ಪಡಿಸಲಾಯಿತು. ತಾಲೂಕ ಪಂಚಾಯತ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಶ್ರೀ ಸಂಜೀವ ಹಿಪ್ಪರಗಿ ರವರು ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಈ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದಇವರು ಸ್ವ ಸಹಾಯ ಸಂಘದ ಮಹಿಳೆಯರು ಈ ಯೋಜನೆಯಿಂದ ಸದುಪಯೋಗ ಪಡೆದುಕೊಂಡು ಆದಾಯ ತರುವ ಉದ್ಯೋಗ ಮಾಡಿ ಆರ್ಥಿಕವಾಗಿ ಸದೃಡರಾಗಿ ಸರಿಯಾದ ಸಮಯಕ್ಕೆ ಸಾಲ ಮರುಪಾವತಿ ಮಾಡಬೇಕು ಎಂದು ತಿಳಿಸಿ, ಮತ್ತು ಹೆಚ್ಚಿನ ಲಾಭ ಪಡೆದು ಉದ್ಯಮಿಗಳು ಆಗಬೇಕೆಂದು ತಿಳಿಸಿದರು.ಇದೇ ಸಂಧರ್ಭದಲ್ಲಿ 25 ಸ್ವ ಸಹಾಯ ಸಂಘಗಳಿಗೆ ರೂ.37,50,000/– ಕೆನರಾ ಬ್ಯಾಂಕ ಮೂಲಕ ಸಾಲ ಮಂಜೂರಾತಿ ಪತ್ರವನ್ನು ವಿತರಿಸಿದರು.

ಮುಖ್ಯ ಅತಿಥಿಗಳಾದ ಶ್ರೀ ಸುನೀಲಕುಮಾರ ವಿಭಾಗೀಯ ಮ್ಯಾನೇಜರ್ ಬಾಗಲಕೋಟೆ ಇವರು ಮಾತನಾಡಿ ಬ್ಯಾಂಕಿನಲ್ಲಿರುವ ಹಲವಾರು ಯೋಜನೆಗಳ ಬಗ್ಗೆ ಮಾಹಿತಿ ತಿಳಿಸಿ, ಸಂಘದ ಮಹಿಳೆಯರು ಉಳಿತಾಯ ಮತ್ತು ದಾಖಲಾತಿಯನ್ನು ಸರಿಯಾಗಿ ನಿರ್ವಹಣೆ ಮಾಡಿ ಬ್ಯಾಂಕಿನ ಸಾಲದ ಸೌಲಭ್ಯವನ್ನು ಪಡೆದುಕೊಂಡು ಗುಂಪು ಚಟುವಟಿಕೆ ಮಾಡಿ ಆರ್ಥಿಕ ಸಬಲೀಕರಣವಾಗಬೇಕೆಂದು ತಿಳಿಸಿದರು.

ಇನ್ನೊರ್ವ ಅತಿಥಿಗಳಾದ ಶ್ರೀ ಮಧುಕರ್ ರೆಡ್ಡಿ ಮುಖ್ಯ ಪ್ರಭಂದಕರು ಕೆನರಾ ಬ್ಯಾಂಕ, ಮುಧೋಳ ಇವರು ಮಾತನಾಡಿ ಸ್ವ ಸಹಾಯ ಸಂಘಗಳು ನಮ್ಮ ಬ್ಯಾಂಕನಲ್ಲಿ ಉಳಿತಾಯ ಖಾತೆ ತೆರೆದು ಕಡಿಮೆ ಸೇವಾ ಶುಲ್ಕದ ಸಾಲ ಸೌಲಭ್ಯಗಳು ಪಡೆದುಕೊಂಡು ಆರ್ಥಿಕವಾಗಿ ಸದೃಡರಾಗಿರಿ ಎಂದು ತಿಳಿಸಿ ಮತ್ತು ಬ್ಯಾಂಕಿನಲ್ಲಿ ಇರುವ ವಿವಿಧ ಯೋಜನೆಗಳ ಬಗ್ಗೆ ಸಹ ವಿವರವಾಗಿ ವಿವರಿಸಿದರು.

ಇನ್ನೊರ್ವಅತಿಥಿಗಳಾದ ಸಂಜೀವಿನಿ ಯೋಜನೆಯ ಜಿಲ್ಲಾ ವ್ಯವಸ್ಥಾಪಕರಾದ ಶ್ರೀ ಭೀಮಾನಂದ ಶೆಟ್ಟರ ಇವರು ಮಾತನಾಡಿ ಸ್ವ ಸಹಾಯ ಸಂಘದ ಪದಾಧಿಕಾರಿಗಳಿಗೆ ಸಂಜೀವಿನಿ ಯೋಜನೆಯ ಗುರಿ ಉದ್ದೇಶ ತಿಳಿಸಿ ಬ್ಯಾಂಕಿನ ಸೌಲಭ್ಯ ಪಡೆದು ಜೀವನೋಪಾಯ ಚಟುವಟಿಕೆಗಳ ಮಾಡಬೇಕೇಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿಗಳಾದ ಅಮೂಲ್ಯ ಆರ್ಥಿಕ ಸಾಕ್ಷರತಾ ಕೇಂದ್ರ, ಮುಧೋಳದ ಶ್ರೀ ಮಂಜುನಾಥ ಹಾದಿಮನಿ ಇವರು ಮಾತನಾಡಿ ಬ್ಯಾಂಕಿನಲ್ಲಿರುವಸರಕಾರದ ಯೋಜನೆಗಳಾದ ಸಾಮಾಜಿಕ ಭದ್ರತಾ ಯೋಜನೆ ಹಾಗೂ ಡಿಜಿಟಲ್ ಬ್ಯಾಂಕ್,ಸೈಬರ ಅಪರಾಧ ಬಗ್ಗೆ ಉದಾಹರಣೆಗಳೂಂದಿಗೆ ಜಾಗೃತಿ ಮೂಡಿಸಿದರು.

ಈ ಕಾರ್ಯಕ್ರಮದಲ್ಲಿ ತಾಲೂಕ ಕಾರ್ಯಕ್ರಮ ವ್ಯವಸ್ಥಾಪಕರಾದ ಶ್ರೀ ಸಂಜೀವ ಬೆಳ್ಳಂಡಗಿ,ಕೆನರಾ ಬ್ಯಾಂಕಿನ ಅಧಿಕಾರಿಳಾದಶ್ರೀ ದೀಪಕ ಹೀರೆಮಠ, ಕೆಂಚಪ್ಪ ಚೌರಿ, ಶಿವರಾಜ, ಮಹಾತೇಂಶ ಹಗರಿ, ಸುನೀತಾ ಹೀರೆಮಠ,ಸುರಜ್,ಪ್ರವೀಣ ಲೋಕಾಪುರ, ಸಂಜೀವಿನಿ ಯೋಜನೆ ಸಿಬ್ಬಂದಿಗಳಾದ ಅಡಿವೇಶಧೂಪದ,ವಿಠ್ಠಲ ಮಾಂಗ, ಕುಮಾರಿ ಶಶಿಕಲಾ, ಶ್ರಿಮತಿ ದೀಪಾ ಶಿರೋಳ,ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಮುಧೋಳ ತಾಲೂಕಿನ 180ಕ್ಕೂ ಹೆಚ್ಚು ಸ್ವ ಸಹಾಯ ಸಂಘದ ಸದಸ್ಯರು ಭಾಗವಹಿಸಿದ್ದರು.ರೇವಣಸಿದ್ದಯ್ಯ ಮರೇಗುದ್ದಿ ಕಾರ್ಯಕ್ರಮವನ್ನು ನಿರೂಪಿಸಿದರು, ಶ್ರೀಶ್ರೀಕಾಂತ ಹೋಳೆನ್ನವರವಂದಿಸಿದರು.

# 1008 ಮುತ್ತೈದೆಯರಿಗೆ ಉಡಿ ತುಂಬಿ ಜಾತ್ರೆಗೆ ಚಾಲನೆ: ವೀರರುದ್ರಮುನಿ ಶ್ರೀಅಭಿಮತ

# ಹೆಣ್ಣಿನ ಜನ್ಮಕ್ಕೆ ಮುತ್ತೈದೆತನ ಒಂದು ಭಾಗ್ಯ

ವರದಿ: ಲಾಲಸಾಬ ಸವಾರಗೋಳ.

ವಿಜಯಪುರ: ಹೆಣ್ಣು ಮಗಳು, ಪತ್ನಿ, ತಾಯಿ ಜತೆಗೆ ಸಹೋದರಿ, ಸೊಸೆ, ಅತ್ತೆ, ಅಜ್ಜಿ ಹೀಗೆ ಹತ್ತಾರು ಬಗೆಯ ಪಾತ್ರಗಳನ್ನು ಬದುಕೆಂಬ ಈ ನಾಟಕದಲ್ಲಿ ಸಮರ್ಪಕವಾಗಿ ನಿಭಾಯಿಸಿದಾಗ ಮಾತ್ರ ಬದುಕಿನಲ್ಲಿ ಸಾರ್ಥಕತೆ ದೊರಕಲಿದೆ ಎಂದು ಮುತ್ತಗಿ ಪಟ್ಟದೇವರ ಮಠದ ವೀರರುದ್ರಮುನಿ ಶಿವಾಚಾರ್ಯ ಮಹಾ ಸ್ವಾಮಿಗಳು ಆಶೀರ್ವಚನ ನೀಡಿದರು.

ಸಮೀಪದ ಮುತ್ತಗಿ ಗೌರಿ ಶಂಕರ ಜಾತ್ರಾ ಮಹೋತ್ಸವದ ನಿಮಿತ್ಯವಾಗಿ ಸ್ಥಳೀಯ ಶ್ರೀ ದಾನೇಶ್ವರಿ ಗುಂಪಿನ ವತಿಯಿಂದ ಸೋಮವಾರ ರಾತ್ರಿ ಜರುಗಿದ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಹೆಣ್ಣಿನ ಜನ್ಮಕ್ಕೆ ಮುತ್ತೈದೆತನವೆಂಬುದು ಮಹತ್ತರವಾದ ಘಟ್ಟ, ಕುಂಕುಮ, ಮೂಗುತಿ, ತಾಳಿ, ಬಳೆ ಮತ್ತು ಕಾಲುಂಗುರವೆಂಬ ಈ ಪಂಚರತ್ನಗಳನ್ನು ಪಡೆದಾಗಲೇ ಆಕೆಯ ಜನ್ಮ ಸಾರ್ಥಕ ಎಂದರು.



ಚಿಮ್ಮಲಗಿ ಸಿದ್ದರೇಣುಕ ಶಿವಾಚಾರ್ಯರು, ಸ್ಥಳೀಯ ಪ್ರಭಯ್ಯಸ್ವಾಮಿ ಕೊಡೆಕಲ್ಲ ಆಶೀರ್ವಚನ ನೀಡಿದರು. ಶಿವಯ್ಯ ಸ್ವಾಮಿ ಕಂಬಿಮಠ ಸಾನಿಧ್ಯ ವಹಿಸಿದ್ದರು. ಗ್ರಾಮಪಂಚಾಯತ್ ಮಾಜಿ ಅಧ್ಯಕ್ಷೆ ತೇಜಸ್ವಿನಿ ಉಣ್ಣೆಬಾವಿ, ಶಿಕ್ಷಕರಾದ ಆರ್. ಬಿ. ಬ್ಯಾಕೋಡ, ಶಿವು ಚಿಮ್ಮಲಗಿ, ವೈ. ಕೆ. ಪತ್ತಾರ ಮತ್ತಿತರರು ಇದ್ದರು.

ಇದಕ್ಕೂ ಮುನ್ನ ದಾನೇಶ್ವರಿ ಮೂರ್ತಿಗೆ ಪೂಜೆ ಸಲ್ಲಿಸಿ ಎಲ್ಲ ಮುತ್ತೈದೆಯರಿಗೆ ಅರಿಷಿಣ–ಕುಂಕುಮ ಹಚ್ಚಿ ಬಳೆ, ಬಾಳೆಹಣ್ಣು , ಪಂಚಧಾನ್ಯ, ಪ್ರಸಾದ, ರವಿಕೆ ಬಟ್ಟೆ ಸೇರಿದಂತೆ ಮತ್ತಿತರ ಪದಾರ್ಥಗಳಿಂದ ಉಡಿ ತುಂಬಿ ಗೌರಿಶಂಕರ ಜಾತ್ರೆಗೆ ಚಾಲನೆ ನೀಡಲಾಯಿತು.

# ರಬಕವಿಯ ನಾಶಿ ಫುಡ್ ಸಂಸ್ಥೆಗೆ ಭೇಟಿ ನೀಡಿದ ಕೃಷಿ ಸಚಿವ ಎನ್. ಚೆಲುವನಾರಾಯಣಸ್ವಾಮಿ



ರಬಕವಿ–ಬನಹಟ್ಟಿ : ಬುಧವಾರ ಸಂಜೆ ರಬಕವಿಯ ಅಮಿತ ಮಲ್ಲಿಕಾರ್ಜುನ ನಾಶಿಯವರ ನಾಶಿ ಫುಡ್ ಸಂಸ್ಥೆಗೆ ಕೃಷಿ ಸಚಿವ ಎನ್. ಚೆಲುವನಾರಾಯಣಸ್ವಾಮಿ ಬೇಟಿ ನೀಡಿದರು.

ಈ ಸಂದರ್ಭದಲ್ಲಿ ಅಲ್ಲಿನ ಫುಡ್ ಪ್ರಾಡಕ್ಟಗಳ ಬಗ್ಗೆ ವೀಕ್ಷಣೆ ನಡೆಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ನೀಲಕಂಠ ಮುತ್ತೂರ, ಸ್ಮಿತಾ ನಾಶಿ, ವಿಜಯ ನಾಶಿ, ಡಾ. ರವಿ ಜಮಖಂಡಿ, ರಂಗನಗೌಡ ಪಾಟೀಲ, ಸಂಜಯ ತೆಗ್ಗಿ , ಪ್ರವೀಣ ಹಜಾರೆ, ಸಂಗಯ್ಯ ಅಮ್ಮಣಗಿಮಠ, ಎಂ. ಸಿ. ಸಾಬೋಜಿ, ಮುರುಗೇಶ ಮುತ್ತೂರ, ಮಲ್ಲಪ್ಪ ಸಿಂಗಾಡಿ, ಕೃಷಿ ಸಚಿವರ ವಿಶೇಷ ಕರ್ತವ್ಯ ಅಧಿಕಾರಿ ಎ. ಬಿ. ಪಾಟೀಲ, ಧಾರವಾಡ ಕೃಷಿ ವಿಶ್ವ ವಿದ್ಯಾಲಯದ ಕುಲಪತಿ ಪಿ. ಎಲ್. ಪಾಟೀಲ, ಕುಲಸಚಿವ ಡಾ. ಮಂಜುನಾಥ, ಜಾರಿದಳದ ಅಧಿಕಾರಿ ಬಸವರಾಜ ಮಾಳೆದ, ಕೃಷಿ ಇಲಾಖೆ ಅಧಿಕಾರಿ ಸಿದ್ದಪ್ಪ ಪಟ್ಟಿಹಾಳ, ಕೃಷಿ ಅಧಿಕಾರಿಗಳಾದ ಮೈನೋದ್ದಿನ್ ಜಮಖಂಡಿ, ಎಸ್. ಎಂ. ಬಿರಾದಾರ ಪಿ.ಎಸ್.ಐ. ರಾಘವೇಂದ್ರ ಖೋತ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ದೀಪ ಸಂಜೀವಿನಿ ಕಾರ್ಯಕ್ರಮದ ಮಳಿಗೆ ಉದ್ಘಾಟನೆ

ಮುದೋಳ: ಎನ್,ಆರ್,ಎಲ್,ಎಮ್ ಯೋಜನೆಯ ದೀಪ ಸಂಜೀವಿನಿ ಮಳಿಗೆ ಉದ್ಘಾಟನೆ ಕಾರ್ಯಕ್ರಮವನ್ನು ತಾಲೂಕ ಪಂಚಾಯತ ಆವರಣದ ಮುಧೋಳದಲ್ಲಿ ತಾಲೂಕ ಪಂಚಾಯತ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಶ್ರೀ ಸಂಜೀವ ಹಿಪ್ಪರಗಿ ರವರು ಸಂಜೀವಿನಿ ದೀಪ ಬೆಳಗಿಸುವ ಮೂಲಕ ಮಳಿಗೆಯನ್ನು ಉದ್ಘಾಟಿಸಿದರು.

ಈ ಕಾರ್ಯಕ್ರಮ ಉದ್ಘಾಟಿಸಿ ಇವರು ಮಾತನಾಡಿ ಸ್ವ ಸಹಾಯ ಸಂಘದ ಮಹಿಳೆಯರು ಮಣ್ಣಿನಿಂದ ತಯಾರಿಸಿದ ವಿವಿಧ ಬಗೆಯ ದೀಪಗಳನ್ನು ,ಅಗರಬತ್ತಿ ಮತ್ತು ದೀಪಾವಳಿ ಹಬ್ಬಕ್ಕೆ ಉಪಯೋಗವಾಗುವ ಉತ್ಪನ್ನಗಳನ್ನು ಮಾರಾಟ ಮಾಡಲು ಸೂಕ್ತವಾದ ವೇದಿಕೆ ಆಗಿದೆ.ಎಲ್ಲಾ ಸ್ವ ಸಹಾಯ ಸಂಘದ ಸದ್ಯಸರು ತಾಂತ್ರಿಕವಾದ ತರಬೇತಿ ಪಡೆದು ಉತ್ಪನ್ನಗಳನ್ನು ತಯಾರಿಸಿ ಪ್ಯಾಕಿಂಗ ಮತ್ತು ಬ್ರ್ಯಾಂಡ ಮಾಡಿ ಮಾರಾಟ ಮಾಡಿ ಹೆಚ್ಚಿನ ಲಾಭ ಪಡೆದು ಉದ್ಯಮಿಗಳು ಆಗಬೇಕೆಂದು ತಿಳಿಸಿದರು.

ಮುಖ್ಯ ಅತಿಥಿಗಳಾದ ಸಹಾಯಕ ನೀರ್ದೇಶಕರಾದವಿವೇಕ ಬಿರಾದಾರ ಇವರು ಮಾತನಾಡಿ ಮುಧೋಳದಲ್ಲಿ ಸಂಜೀವಿನಿ ಸುಪರ್ ಮಾರುಕಟ್ಟೆ ಆರಂಭವಾಗುತ್ತಿದ್ದು, ಈ ಮಾರುಕಟ್ಟೆಗೆ ಸ್ವ ಸಹಾಯ ಸಂಘದ ಸದ್ಯಸರು ಉತ್ಪದನೆ ಮಾಡಿದಂತಹ ಗುಣಮಟ್ಟದ ಉತ್ಪನ್ನಗಳನ್ನು ಮಾರಾಟ ಮಾಡಿ ಆರ್ಥಿಕ ಸಬಲೀಕರಣವಾಗಬೇಕೆಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ತಾಲೂಕ ಕಾರ್ಯಕ್ರಮ ವ್ಯವಸ್ಥಾಪಕರಾದ ಶ್ರೀ ಸಂಜೀವ ಬೆಳ್ಳಂಡಗಿ , ಅಡಿವೇಶ ಧೂಪದ,ವಿಠ್ಠಲ ಮಾಂಗ, ಶ್ರೀಮತಿ ದೀಪಾ ಶಿರೋಳ ಹಾಗೂ ತಾಲೂಕಿನ ಎಲ್ಲಾ ಗ್ರಾಮ ಪಂಚಾಯತ ಮಟ್ಟದ ಒಕ್ಕೂಟದ ಪದಾಧಿಕಾರಿಗಳು ಹಾಗೂ ಸ್ವ ಸಹಾಯ ಸಂಘದ ಸದ್ಯಸರು ಭಾಗವಹಿಸಿದರು.

ಈ ಕಾರ್ಯಕ್ರಮವನ್ನು ಶ್ರೀ ಶ್ರೀಕಾಂತ ಹೋಳೆನ್ನವರ ಸ್ವಾಗತಿಸಿದರು ,ರೇವಣಸಿದ್ದಯ್ಯ ಮರೇಗುದ್ದಿ ಕಾರ್ಯಕ್ರಮವನ್ನು ನಿರೂಪಿಸಿದರು,ಕುಮಾರಿ ಶಶಿಕಲಾ.ಎಮ್,ಎಸ್ ವಂದಿಸಿದರು.

# ಪ್ರಧಾನಮಂತ್ರಿ ಮಹಿಳಾ ಸಮ್ಮಾನ್ ಯೋಜನೆ ಬಗ್ಗೆ ಗ್ರಾಮವಾಸಿಗಳಿಗೆ ಮಾಹಿತಿ

## ಕೇಂದ್ರ ಸರ್ಕಾರದ ಯೋಜನೆಗಳ ಮಾಹಿತಿಯ ಕಿರುಪುಸ್ತಕ, 2024 ರ ಕ್ಯಾಲೆಂಡರ್ ವಿತರಣೆ




* ಗ್ರಾಮದಲ್ಲಿ ಕಿರು ಮಳಿಗೆ ತೆರೆದು ಉಜ್ವಲ ಉಚಿತ ಗ್ಯಾಸ್ ನೋಂದಣಿಯನ್ನು ಮಾಡಿಸಲಾಯಿತು
* ಕೃಷಿಗಾಗಿ ರೈತರಿಗೆ ಡ್ರೋನ್ ಮೂಲಕ ಪರಿವೀಕ್ಷಣೆ ನಡೆಸಲಾಯಿತು, ಕೇಂದ್ರ ಸರ್ಕಾರದ ಯೋಜನೆಗಳ ಬಗ್ಗೆ ಗ್ರಾಮಸ್ಥರಿಗೆ ವಿಡಿಯೊ ಮೂಲಕ ಜಾಗೃತಿ ಮೂಡಿಸಲಾಯಿತು
* ವಿವಿಧ ರಾಷ್ಟ್ರೀಕೃತ ಬ್ಯಾಂಕ್, ಕರ್ನಾಟಕ ಗ್ರಾಮೀಣ ಬ್ಯಾಂಕ್, ಇಂಡಿಯನ್ ಆಯಿಲ್ , ಭಾರತ್ ಪೆಟ್ರೋಲಿಯಂ , ರಾಷ್ಟ್ರೀಯ ರಾಸಾಯನಿಕ ಹಾಗೂ ರಸಗೊಬ್ಬರ ಸಂಸ್ಥೆ, ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯಗಳ ಸಹಯೋಗದೊಂದಿಗೆ ನಾನಾ ಜಿಲ್ಲೆಗಳಲ್ಲಿ ವಿಕಸಿತ ಭಾರತ ಸಂಕಲ್ಪ ಯಾತ್ರೆ
* ಉತ್ತರ ಕನ್ನಡ, ಕೊಪ್ಪಳ , ಚಾಮರಾಜನಗರ, ಮೈಸೂರು, ಕೋಲಾರ ಜಿಲ್ಲೆಗಳಲ್ಲಿ ಸಂಚಾರ ನಡೆಸಿದ ವಿಕಸಿತ ಭಾರತ ಸಂಕಲ್ಪ ಯಾತ್ರೆ

ಕೋಲಾರ ಜಿಲ್ಲೆ : ಕೋಲಾರ ಜಿಲ್ಲೆಯಲ್ಲಿ ವಿಕಸಿತ ಭಾರತ ಸಂಕಲ್ಪ ಯಾತ್ರೆ ಮುಂದುವರಿದಿದ್ದು, ಇಂದು ಮುಳಬಾಗಿಲು ತಾಲೂಕು ಕಪ್ಪಲಮಡಗು ಗ್ರಾಮದಲ್ಲಿ ಪಂಚಾಯತಿ ಅಧ್ಯಕ್ಷರಾದ ಪಾರ್ವತಮ್ಮ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ಗ್ರಾಮೀಣ ಬ್ಯಾಂಕ್ ವ್ಯವಸ್ಥಾಪಕರಾದ ಶ್ರೀಕಾಂತ್ ನಾಯಕ್ ಪ್ರಧಾನ ಮಂತ್ರಿ ಜೀವನ್ ಭೀಮಾ ಸುರಕ್ಷಾ ಯೋಜನೆ ಸೇರಿದಂತೆ ಮುದ್ರ, ಕಿಸಾನ್ ಕ್ರೆಡಿಟ್ ಕಾರ್ಡ್, ಬಗ್ಗೆ ಮಾತನಾಡಿದರು.

ಉತ್ತರ ಕನ್ನಡ ಜಿಲ್ಲೆ : ಕೇಂದ್ರ ಸರ್ಕಾರದ ವಿವಿದ ಯೋಜನೆಯ ಬಗ್ಗೆ ಪಂಚಾಯತ ಮಟ್ಟದಲ್ಲಿ ತಿಳಿಪಡಿಸಲು ಹಮ್ಮಿಕೊಂಡಿರುವ ವಿಕಸಿತ ಭಾರತ ಸಂಕಲ್ಪ ಯಾತ್ರೆ ಇಂದು ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲೂಕಿನ ಇಟಗಿ ಪಂಚಾಯಿತದಲ್ಲಿ ಹಮ್ಮಿಕೊಳ್ಳಲಾಯಿತು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಗಿರಿಜಾ ನಾಯ್ಕ ಕಾರ್ಯ ಕ್ರಮ ಉದ್ಘಾಟಿಸಿದರು.

ಬಿಳಗಿ ಕೆನರಾ ಬ್ಯಾಂಕ್ ಸಹಾಯಕ ವ್ಯವಸ್ಥಾಪಕರಾದ ಪ್ರವೀಣ್ ವಿಮಾ ಯೋಜನೆ ಗಳ ಬಗ್ಗೆ ತಿಳಿಸಿದರು. ವಾಲ್ಮೀಕಿ ಗ್ಯಾಸ್ ಮಾಲಿಕರಾದ ಮಂಜುನಾಥ ಉಜ್ವಲ ಯೋಜನೆ ಬಗ್ಗೆ ಮಾಹಿತಿ ನೀಡಿದರು. ಆರೋಗ್ಯ ಸಹಾಯಕಿ ಕಾವ್ಯ ನಾಯ್ಕ ಇಲಾಖೆಯ ಸೌಲಭ್ಯ ಗಳ ಬಗ್ಗೆ ಮಾಹಿತಿ ನೀಡಿದರು.

ಕೊಪ್ಪಳ ಜಿಲ್ಲೆ : ಕೊಪ್ಪಳ ಜಿಲ್ಲೆಯ ಯಲಬುರ್ಗಾ ವಿಧಾನ ಸಭಾ ಕ್ಷೇತ್ರದ ಕುಕನೂರು ತಾಲೂಕಿನ ಬಾನಾಪುರ ಗ್ರಾಮದಲ್ಲಿ ಇಂದಿನಿಂದ ವಿಕಸಿತ ಭಾರತ ಸಂಕಲ್ಪ ಯಾತ್ರೆ ಆರಂಭವಾಗಿದೆ. ಗ್ರಾಮ ಪಂಚಾಯತಿ ಉಪಾಧ್ಯಕ್ಷ ಪವಿತ್ರಾ ಪ್ರಕಾಶ ಬಂಗೇರ ಅವರು ಗ್ರಾಮ ಪಂಚಾಯತಿ ಆವರಣದಲ್ಲಿ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿ ಸದಸ್ಯ ರಾಮಪ್ಪ ಕೋಮಲಾಪುರ, ನೀಲಕಂಠಯ್ಯ ಸಸಿಮಠ, ರೇಣುಕಾ ವೈ. ತಳವಾರ, ತಾಲೂಕಾ ಆರ್ಥಿಕ ಸಾಕ್ಷರತೆಯ ಸಲಹೆಗಾರ ಪಂಪನಗೌಡ ಮತ್ತು ಎಸ್ ಬಿ ಐ ವ್ಯವಸ್ಥಾಪಕರು, ಗ್ರಾಮದ ಆರೋಗ್ಯ ಕೇಂದ್ರದ ಸಿಬ್ಬಂದಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕರ್ತರು ಸ್ವಸಹಾಯ ಗುಂಪಿನ ಮಹಿಳೆಯರು ಉಪಸ್ಥಿತರಿದ್ದರು.

ಮೈಸೂರು ಜಿಲ್ಲೆ : ವಿಕಸಿತ ಭಾರತ ಸಂಕಲ್ಪ ಯಾತ್ರೆಯು ಮೈಸೂರು ಜಿಲ್ಲೆ ಹೆಚ್ ಡಿ ಕೋಟೆ ತಾಲೂಕಿನ ಹೊಮ್ಮರಗಳ್ಳಿ ಹಾಗೂ ಮಾದಾಪುರ ಗ್ರಾಮ ಪಂಚಾಯತಿಗೆ ತೆರಳಿತು. ನೆರೆದಿದ್ದ ಗ್ರಾಮದ ಜನರಿಗೆ ಕೇಂದ್ರ ಸರ್ಕಾರದ ಯೋಜನೆಗಳು ಹಾಗೂ ಸೌಲಭ್ಯಗಳ ಮಾಹಿತಿಯನ್ನು ನೀಡಲಾಯಿತು. ಜನರು ಹೆಚ್ಚಿನ ಆಸಕ್ತಿಯಿಂದ ಕೇಂದ್ರ ಸರ್ಕಾರ ನೀಡುತ್ತಿರುವ ಸವಲತ್ತುಗಳ ಮಾಹಿತಿಯನ್ನು ಪಡೆದುಕೊಂಡರು. ರೈತರು ಹಾಗೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಯೋಜನೆಗಳ ಮಾಹಿತಿ ಬಿತ್ತರಿಸುವ ವೀಡಿಯೋ ವೀಕ್ಷಿಸಿದರು.

ವಿಕಸಿತ ಭಾರತ ಸಂಕಲ್ಪ ಯಾತ್ರೆಯ ಮತ್ತೊಂದು ವಾಹನ ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ದೊಡ್ಡಬೈಲಾಳು ಹಾಗೂ ಮೈಸೂರು ತಾಲೂಕಿನ ಆನಂದೂರು ಗ್ರಾಮ ಪಂಚಾಯತಿಗೆ ತೆರಳಿಕಾರ್ಯಕ್ರಮ ನಡೆಸಿತು. ಕೆಲವು ಫಲಾನುಭವಿಗಳು ತಮ್ಮ ಅನುಭವ ಹಂಚಿಕೊಂಡರು.

ಚಾಮರಾಜನಗರ ಜಿಲ್ಲೆ : ವಿಕಸಿತ ಭಾರತ ಸಂಕಲ್ಪ ಯಾತ್ರೆಯು ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕಿನ ಹೊರೆಯಾಳ ಹಾಗೂ ಕೋಟೆಕೆರೆ ಗ್ರಾಮಪಂಚಾಯಿತಿಯಲ್ಲಿ ತೆರಳಿ ಕಾರ್ಯಕ್ರಮ ನಡೆಸಿತು. ಕೇಂದ್ರ ಸರ್ಕಾರದ ಯೋಜನೆಗಳು ಗ್ರಾಮಸ್ಥರಿಗೆ ಯಾವ ರೀತಿ ಪ್ರಯೋಜನಕಾರಿ ಎಂದು ತಿಳಿಸಲಾಯ್ತು.

ಒಟ್ಟು 3 ವಾಹನಗಳು ಜಿಲ್ಲೆಯ ಹಲವು ಗ್ರಾಮಪಂಚಾಯಿತಿಗಳಲ್ಲಿ ಪ್ರತಿನಿತ್ಯ ಸಂಚರಿಸುತ್ತಿವೆ. ಗುಂಡ್ಲುಪೇಟೆ ತಾಲೂಕಿನ ಮೂಕಹಳ್ಳಿ ಹಾಗೂ ನೆನೆಕಟ್ಟೆ ಗ್ರಾಮ ಪಂಚಾಯತಿಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಿತು. ನೆರೆದಿದ್ದ ಜನರು ಪ್ರಧಾನಮಂತ್ರಿಗಳು ನೀಡಿರುವ ವೀಡಿಯೋದ ಸಂದೇಶ ವೀಕ್ಷಿಸಿದರು. ಫಲಾನುಭವಿಗಳು ಆಗಮಿಸಿ ಕೇಂದ್ರ ಸರ್ಕಾರದಿಂದ ಪಡೆದ ಯೋಜನೆಗಳ ಕುರಿತು ಅಭಿಪ್ರಾಯ ಹಂಚಿಕೊಂಡರು.

# ಸಂಸತ್ತಿನ ದಾಳಿ ಭಯೋತ್ಪಾದನೆಯ ಪ್ರಾಯೋಗಿಕ ದಾಳಿ: ಕೆ.ಎಂ.ಯೂ ಆತಂಕ

ಇಳಕಲ್: ಸಂಸತ್ತಿನ ಹೊಸ ಕಟ್ಟಡದಲ್ಲಿ ಮತ್ತು ಸಂಸತ್ತಿನ ಹೊರಗಡೆ ಪ್ರಾಂಗಣದಲ್ಲಿ ನಡೆದ ಬಣ್ಣದ ಸ್ಪೋಟಕಗಳ ಘಟನೆ ಗಂಭೀರವಾದ ಭದ್ರತಾ ಲೋಪವಾಗಿದೆ ಇದು ಭವಿಷ್ಯದ ಭಯೋತ್ಪಾದನಾ ದಾಳಿಯ ಪ್ರಾಯೋಗಿಕ ದಾಳಿಯಾಗಿದೇಯೇ ಎಂಬ ಸಂಶೆ ಮೂಡುತ್ತಿದೆ ಎಂದು ಕರ್ನಾಟಕ ಮುಸ್ಲಿಂ ಯೂನಿಟಿಯ ಅಧ್ಯಕ್ಷ ಜಬ್ಬಾರ ಕಲಬುರ್ಗಿ ಆತಂಕ ವ್ಯಕ್ತ ಪಡಿಸಿದ್ದಾರೆ.

ಅತ್ಯಂತ ಕಠೀಣ ಸುರಕ್ಷತಾ ಕೋಟೆಯನ್ನು ಭೇದಿಸಿರುವ ಅಪರಿಚಿತರು ಎಲ್ಲರ ಕಣ್ತಪ್ಪಿಸಿ ಕಲರ ಸ್ಮೋಕ ಬ್ಲಾಸ್ಟಗಳನ್ನು ಸಂಸತ್ತಿನ ಒಳಗೆ ಕೊಂಡ್ಯೊಂದಿದ್ದಾರೆ ಎಂದಾದರೆ ದೇಶದ ದೇಗುಲವೆಂದೆ ಕರೆಯಲ್ಪಡುವ ಸಂಸತ ಎಷ್ಟು ಸುರಕ್ಷೀತ ಎಂದು ಪ್ರಶ್ನಿಸಬೇಕಾಗಿದೆ ಎಂದಿದ್ದಾರೆ.

# 2ಬಿ ಮೀಸಲಾತಿ ಮರುಸ್ಥಾಪಿಸಿ: ಎಸ್‌ಡಿಪಿಐ




ಬೆಳಗಾವಿ : ಮುಸ್ಲಿಂ ಸಮುದಾಯದ 2ಬಿ ಮೀಸಲಾತಿಯನ್ನು ಮರುಸ್ಥಾಪಿಸಿ, ಮೀಸಲಾತಿ ಪ್ರಮಾಣವನ್ನು ಶೇ 8ಕ್ಕೆ ಹೆಚ್ಚಿಸುವಂತೆ ಆಗ್ರಹಿಸಿ ಸೋಶಿಯಲ್ ಡೆಮಾಕ್ರಾಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ವತಿಯಿಂದ ನಗರದಲ್ಲಿ ಬೃಹತ್ ಪ್ರತಿಭಟನೆ ಹಾಗೂ ಬೈಕ್ ರ್‍ಯಾಲಿ ನಡೆಸಲಾಯಿತು.

ಅಂಬೇಡ್ಕರ್ ಉದ್ಯಾನದಿಂದ ಜಾಥಾ ಆರಂಭಿಸಿದ ಯುವಕರು ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಘೋಷಣೆ ಕೂಗಿದರು. ರಾಣಿ ಚನ್ನಮ್ಮ ವೃತ್ತ ಹಾಗೂ ಗಾಂಧಿ ನಗರದಲ್ಲಿ ರಸ್ತೆ ತಡೆ ನಡೆಸಿದರು. ಬೆಳಗಾವಿ ನಗರ ಪ್ರವೇಶಿಸುವ ಹೆದ್ದಾರಿ ಸ್ಥಳದಲ್ಲಿ ಸಂಚಾರ ದಟ್ಟಣೆ ಉಂಟಾಗಿದ್ದರಿಂದ ಸಂಚಾರ ಮಾರ್ಗ ಬದಲಾವಣೆ ಮಾಡಲಾಯಿತು. ಒಂದು ಗಂಟೆಗೂ ಹೆಚ್ಚು ಹೊತ್ತು ವಾಹನ ಸವಾರರು ಪರದಾಡಿದರು. ಈ ವೇಳೆ ಕೆಲವರು ಪೊಲೀಸರೊಂದಿಗೆ ವಾಗ್ವಾದ ನಡೆಸಿದರು.

'ಗಾಂಧಿನಗರದಿಂದ ಪ್ರತಿಭಟನಾ ರ್‍ಯಾಲಿ ನಡೆಸಲು ಅನುಮತಿ ಇಲ್ಲ. 10 ಮುಖಂಡರು ವಾಹನದಲ್ಲಿ ತೆರಳಿ ಮಾಲಾರ್ಪಣೆ ಮಾಡಿ ನಂತರ, ವಾಹನ ಮೂಲಕ ಸುವರ್ಣ ವಿಧಾನಸೌಧ'ದವರೆಗೆ ತೆರಳಬಹುದು' ಎಂದು ಪೊಲೀಸರು ಸಮಾಜಾಯಿಷಿ ನೀಡಿದರು. ಇದಕ್ಕೆ ಒಪ್ಪದ ಪ್ರತಿಭಟನಾಕಾರಾರರು, ನಮ್ಮದು ಪ್ರತಿಭಟನೆ ಅಲ್ಲ ಜಾಗೃತಿ ರ್‍ಯಾಲಿ ಎಂದು ಪಟ್ಟು ಹಿಡಿದರು. ನಂತರ ಪೊಲೀಸರು ಎಲ್ಲರನ್ನೂ ಬಸ್ಸಿನಲ್ಲಿ ಹತ್ತಿಸಿ ಸುವರ್ಣಸೌಧಕ್ಕೆ ಕರೆದೊಯ್ದರು.

ಪಕ್ಷದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಭಾಸ್ಕರ್ ಪ್ರಸಾದ, ಅಶ್ರಫ್, ರಿಯಾಜ್ ಹಾಜರಿದ್ದರು.

# ಗಂದಿಗವಾಡ: ಕನ್ನಡ ಸಾಹಿತ್ಯ ಸಮ್ಮೇಳನ ಜ.6ಕ್ಕೆ

ಖಾನಾಪುರ: 'ತಾಲ್ಲೂಕಿನ ಗಂದಿಗವಾಡ ಗ್ರಾಮದಲ್ಲಿ 2024ರ ಜ.6ರಂದು ತಾಲ್ಲೂಕು ಮಟ್ಟದ 9ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಸಮೀಪದ ನಡೆಸಲು ನಿರ್ಧರಿಸಲಾಗಿದೆ' ಎಂದು ಕನ್ನಡಪರ ಹೋರಾಟಗಾರ ರೇವಣಸಿದ್ಧಯ್ಯ ಹಿರೇಮಠ ಹೇಳಿದರು.

ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದ ಗಂದಿಗವಾಡದ ಸಾಹಿತಿ ಮೃತ್ಯುಂಜಯಸ್ವಾಮಿ ಹಿರೇಮಠ ಅವರನ್ನು ಗಂದಿಗವಾಡದ ಅವರ ನಿವಾಸದಲ್ಲಿ ಸತ್ಕರಿಸಿ ಸಮ್ಮೇಳನಕ್ಕೆ ಆಹ್ವಾನ ನೀಡಿ ಅವರು ಮಾತನಾಡಿದರು.

'ಸಮ್ಮೇಳನದಲ್ಲಿ ನಾಡು–ನುಡಿಯ ಬಗ್ಗೆ ಅಭಿಮಾನ ಮೂಡಿಸುವ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಚಿಂತನೆ ನಡೆಸಲಾಗಿದೆ' ಎಂದರು.

ಕಸಾಪ ತಾಲ್ಲೂಕು ಘಟಕದ ನಿಕಟಪೂರ್ವ ಅಧ್ಯಕ್ಷ ವಿ.ವಿ ಬಡಿಗೇರ ಮಾತನಾಡಿ, 'ಕನ್ನಡ ಸಾಹಿತ್ಯ, ರಂಗಭೂಮಿ, ಸಂಗೀತ, ಧಾರ್ಮಿಕ,

ಆಧ್ಯಾತ್ಮಿಕ, ಶಿಕ್ಷಣ, ಪ್ರವಚನ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಮಂಚೂಣಿಯಲ್ಲಿದ್ದು ಕನ್ನಡ ಸೇವೆ ಸಲ್ಲಿಸುತ್ತಿರುವ ಶಿಕ್ಷಕ ಹಾಗೂ ಬಸವ ತತ್ವ ಪರಿಪಾಲಕ ಮೃತ್ಯುಂಜಯಸ್ವಾಮಿ ಹಿರೇಮಠ ಅವರನ್ನು ಅಧ್ಯಕ್ಷರಾಗಿ ಆಯ್ಕೆಮಾಡಲಾಗಿದೆ' ಎಂದರು.

ಕಸಾಪ ತಾಲ್ಲೂಕು ಘಟಕದ ಅಧ್ಯಕ್ಷ ಬಸವಪ್ರಭು ಹಿರೇಮಠ, ಪ್ರಭುದೇವ ಹಿರೇಮಠ, ಗಂದಿಗವಾಡ ಗ್ರಾಮ ಪಂಚಾಯ್ತಿ ಅಧ್ಯಕ್ಷ ದೇಸಾಯಿ ಗಾಳಿ, ಮಹಾಂತೇಶ ಕಮತಗಿ, ಈರಯ್ಯಾ ಹಿರೇಮಠ, ಮಂಜುನಾಥ ಶೆಟ್ಟೆಣ್ಣವರ, ನಿಂಗಪ್ಪ ಮುಂಡಿ, ಪ್ರಕಾಶ ಹಿರೇಮಠ, ವಿಜಯ ಯಕಾಜನವರ, ಬಸವರಾಜ ಯಡಾಲ, ವೀರಭದ್ರ ಜವಳಿ, ಬಸವರಾಜ ಭಂಗಿ, ಆನಂದ ಶೆಟ್ಟಣ್ಣವರ, ರಾಮಲಿಂಗ ಕುರೇರ, ಭೂಶಪ್ಪ ಶೆಟೆಣ್ಣವರ ಇದ್ದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State